# ಎಂ. ವಿ. ವಾಸುದೇವರಾವ್



ಎನ್. ಕೆ. ಹನುಮಂತಯ್ಯ

ರಂಗಸಂಪನ್ನರು ಮಾಲಿಕೆ : ೧೯

# ಎಂ. ವಿ. ವಾಸುದೇವರಾವ್

ಎನ್. ಕೆ. ಹನುಮಂತಯ್ಯ

**ಕರ್ನಾಟಕ ನಾಟಕ ಅಕಾಡೆಮಿ**

ರವೀಂದ್ರ ಕಲಾಕ್ಷೇತ್ರ, ಜೆ. ಸಿ. ರಸ್ತೆ

ಬೆಂಗಳೂರು - ೫೬೦ ೦೦೨

**M. V. VASUDEVA RAO** : A Monograph in Kannada by
N. K. Hanumanthaiah
C/o Bhaskar Reddy, V.B.T. Layout. Arakere, Bannerughatta Road
Bangalore - 560 076
Published by B.T. Muni Rajaiah
Registrar, Karnataka Nataka Academy
Ravindra Kalakshetra, J. C. Road, Bangalore - 560 002

| | | |
|---|---|---|
| Chief Editor | : | C. G. Krishnaswamy |
| Editors | : | Dr. Siddhaling Pattanshetti |
| | | K. V. Nagaraja Murthy, |
| | | T. Raghu, Hooli Shekhar |
| First Impression | : | February, 2001 |
| Pages | : | 48 |
| Cover Design | : | Krishna Raichur |


© Author

Printed by Manohar Printing Press, Market, Dharwad - 580 001
Ph : 0836- 790030 Price : Rs. 30/-

| | | |
|---|---|---|
| ಎಂ. ವಿ. ವಾಸುದೇವರಾವ್ | : | ರಂಗಸಂಪನ್ನರ ಕಿರು ಜೀವನಚರಿತ್ರೆ |
| ಲೇಖಕರು | : | ಎನ್. ಕೆ. ಹನುಮಂತಯ್ಯ |
| ಪ್ರಕಾಶನ | : | ಬಿ. ಟಿ. ಮುನಿರಾಜಯ್ಯ |
| | | ರಿಜಿಸ್ಟ್ರಾರ್, ಕರ್ನಾಟಕ ನಾಟಕ ಅಕಾಡೆಮಿ |
| | | ರವೀಂದ್ರ ಕಲಾಕ್ಷೇತ್ರ, ಬೆಂಗಳೂರು - ೫೬೦ ೦೨ |
| ಪ್ರಧಾನ ಸಂಪಾದಕರು | : | ಸಿ. ಜಿ. ಕೃಷ್ಣಸ್ವಾಮಿ |
| ಸಂಪಾದಕರು | : | ಡಾ. ಸಿದ್ದಲಿಂಗ ಪಟ್ಟಣಶೆಟ್ಟಿ |
| | | ಕೆ. ವಿ. ನಾಗರಾಜಮೂರ್ತಿ, |
| | | ಟಿ. ರಘು, ಹೂಲಿ ಶೇಖರ್ |
| ಪ್ರಥಮ ಮುದ್ರಣ | : | ಫೆಬ್ರವರಿ, ೨೦೦೧ S |
| ಮುದ್ರಣ | : | ಮನೋಹರ ಪ್ರಿಂಟಿಂಗ್ ಪ್ರೆಸ್, ಮಾರ್ಕೆಟ್ |
| | | ಧಾರವಾಡ - ೫೮೦ ೦೦೧ |
| ಬೆಲೆ | : | ರೂ. ೩೦/- |

# ಮೊದಲ ಮಾತು

ಕರ್ನಾಟಕ ನಾಟಕ ಅಕಾಡೆಮಿಯು ವರ್ಷದುದ್ದಕ್ಕೂ ನಾಡಿನಾದ್ಯಂತ ಹಾಗೂ ನಾಡಿನ ಹೊರಗಡೆ ರಂಗಚಟುವಟಿಕೆಗಳನ್ನು ಹಮ್ಮಿಕೊಳ್ಳುತ್ತ ಕನ್ನಡದ ನಾಟಕ ಕ್ಷೇತ್ರವನ್ನು ನಿರಂತರ ವಿಸ್ತರಿಸುತ್ತ ಬಂದಿದೆ. ಇಂಥ ಕಾರ್ಯಗಳ ಜೊತೆಗೆ ನಾಟಕ ಕೃತಿ. ರಂಗ ವಿಮರ್ಶೆ, ರಂಗಕರ್ಮಿಗಳ ಪರಿಚಯ ಇತ್ಯಾದಿ ಕುರಿತ ಕೃತಿಗಳನ್ನೂ ಆಗಾಗ ಪ್ರಕಟಿಸಿದೆ.

ಕನ್ನಡ ನಾಡಿನಲ್ಲಿ ಎಷ್ಟೋ ಜನ ಮಹತ್ವದ ರಂಗಸಂಪನ್ನರು ಆಗಿಹೋಗಿದ್ದಾರೆ. ಜಾನಪದ, ವೃತ್ತಿ ಮತ್ತು ಹವ್ಯಾಸಿ ಎಲ್ಲ ಕ್ಷೇತ್ರಗಳಲ್ಲಿ ರಂಗಭೂಮಿಯ ಶ್ರೇಯಸ್ಸಿಗಾಗಿ ಶ್ರಮಿಸಿದ ಅಸಂಖ್ಯ ವ್ಯಕ್ತಿಗಳ ಬದುಕಿನ ಪರಿಚಯವು ಅವರು ಗತಿಸಿದ ನಂತರ ನಿಧಾನವಾಗಿ ಇತಿಹಾಸದ ಹಿನ್ನೆಲೆಗೆ ಸಿಲುಕುತ್ತ ಹೋಗುತ್ತದೆ. ಅಂಥವರೆಲ್ಲರ ಬದುಕಿನ ಚರಿತ್ರೆಗಳು ಸುಸಂಘಟಿತವಾಗಿ ನಿರೂಪಿತಗೊಳ್ಳಬೇಕು, ಬರೆಯಲ್ಪಡಬೇಕು. ಹಾಗೆಯೇ ಈಗ ನಮ್ಮೊಡನಿರುವ ಮಹತ್ವದ ಸಾಧನೆಗೈದಿರುವ ನಟರು, ನಾಟಕಕಾರರು, ನಿರ್ದೇಶಕರು, ಹಿನ್ನೆಲೆ ರಂಗಕರ್ಮಿಗಳು ಮುಂತಾದ ರಂಗಸಂಪನ್ನ ವ್ಯಕ್ತಿಗಳನ್ನು ಕುರಿತು ಆದಷ್ಟು ಬೇಗನೆ ಕೃತಿಗಳನ್ನು ಪ್ರಕಟಿಸುವ ಮೂಲಕ ಅವರ ನೆಮ್ಮದಿಯ, ಕೀರ್ತಿಯ ಬದುಕಿಗೆ ಇನ್ನಷ್ಟು ಹೆಚ್ಚಿನ ಸುಖವನ್ನು ಕೊಡಲೆತ್ನಿಸಬೇಕೆಂದು ನಿರ್ಧರಿಸಿ, ನಾಟಕ ಅಕಾಡೆಮಿ ಈ ನಿಟ್ಟಿನಲ್ಲಿ ಹೆಜ್ಜೆಯಿಟ್ಟಿದೆ.

ಈ ನಿಟ್ಟಿನಲ್ಲಿ ಈಗಾಗಲೇ ೧, ಎಚ್. ಎನ್. ಹೂಗಾರ, ೨. ಬಿ. ವಿ. ಕಾರಂತ, ೩. ಮಾಸ್ಟರ್ ಹಿರಣ್ಣಯ್ಯ, ೪. ಆರ್. ನಾಗರತ್ನಮ್ಮ, ೫. ಎಚ್. ಕೆ. ಯೋಗಾನರಸಿಂಹ, ೬. ಬಿ. ಎನ್. ನಾಣಿ, ೭. ಚಿಂದೋಡಿ ಲೀಲಾ, ೮. ಆರ್. ನಾಗೇಶ್, ೯. ಎಂ. ಎಸ್. ಸತ್ಯು, ೧. ಪಿ. ಬಿ. ಧುತ್ತರಗಿ, ೧. ಹುನಗುಂದ ಬಾಬಣ್ಣ, ೧೨. ಶ್ರೀನಿವಾಸ ತಾವರಗಿರಿ, ೧೩. ಬಿ. ಆರ್. ಅರಿಷಿಣಗೋಡಿ, ೧೪. ಸುಭದ್ರಮ್ಮ ಮನ್ಸೂರು, ೧೫. ಡಿ. ದುರ್ಗಾದಾಸ, ೧೬. ರಾಜಾನಂದ, ೧೭. ಪ್ರಸನ್ನ, ೧೮. ಕೆ. ಎನ್. ಟೇಲರ್ ಅವರನ್ನು ಕುರಿತು ಪುಸ್ತಿಕೆಗಳು ಪ್ರಕಟಗೊಂಡಿವೆ.

ನಾಟಕ ಅಕಾಡೆಮಿಯ ಸದಸ್ಯರಾದ ಡಾ. ಸಿದ್ದಲಿಂಗ ಪಟ್ಟಣಶೆಟ್ಟಿ, ಕೆ. ವಿ. ನಾಗರಾಜಮೂರ್ತಿ ಟಿ. ರಘು ಹಾಗೂ ಹೂಲಿ ಶೇಖರ್ ಅವರುಳ್ಳ ಸಂಪಾದಕ ಸಮಿತಿಯು ಈ ಪುಸ್ತಿಕೆಗಳನ್ನು ಚೆನ್ನಾಗಿ

ಸಂಪಾದಿಸಿ ಹೊರತರುವ ಗುರುತರ ಹೊಣೆಯನ್ನು ಯಶಸ್ವಿಯಾಗಿ ನಿರ್ವಹಿಸಿದೆ. ಅವರಿಗೆ ನಾಟಕ ಅಕಾಡೆಮಿಯ ಹಾಗೂ ವೈಯಕ್ತಿಕವಾಗಿ ನನ್ನ ಪರವಾಗಿ ಗೌರವ ಕೃತಜ್ಞತೆ ಸಲ್ಲಿಸುತ್ತೇನೆ.

ಈ ಪುಸ್ತಿಕೆಗಳ ಪ್ರಕಟಣೆಗೆ ಒಮ್ಮತದಿಂದ ನಿರ್ಧರಿಸಿದ ಹಾಗೂ ಪ್ರಕಟಣೆಗೆ ಪೂರ್ವದಲ್ಲಿಯೇ ಕೆಲವು ಪುಸ್ತಕಗಳನ್ನು ಮಾರಾಟ ಮಾಡಲು ನೆರವಾದ ನಾಟಕ ಅಕಾಡೆಮಿಯ ಎಲ್ಲ ಸದಸ್ಯರಿಗೆ, ಕೃತಿ ರಚಿಸಿ ಕೊಟ್ಟ ಲೇಖಕರಿಗೆ, ಮುಖಪುಟ ಕಲಾವಿದರಿಗೆ ಹಾಗೂ ಮುದ್ರಕರಿಗೆ ಹಾರ್ದಿಕ ಕೃತಜ್ಞತೆಗಳು.

**ಸಿ. ಜಿ. ಕೃಷ್ಣಸ್ವಾಮಿ**
ಅಧ್ಯಕ್ಷರು
ಕರ್ನಾಟಕ ನಾಟಕ ಅಕಾಡೆಮಿ, ಬೆಂಗಳೂರು

# ಸಂಪಾದಕರ ಮಾತು

ನಾಡಿನ ಸಾಂಸ್ಕೃತಿಕ ಇತಿಹಾಸದಲ್ಲಿ ರಂಗಭೂಮಿಯು ವ್ಯಕ್ತಿಗಳ ಬದುಕಿನ ಎಲ್ಲ ಆಯಾಮಗಳನ್ನು ಸ್ಪರ್ಶಿಸಿ ಅವರ ಭಾವೋದ್ವೇಗ, ಭಾವೋನ್ಮಿಲನಗಳಿಗೆ ಅಭಿವ್ಯಕ್ತಿಯನ್ನು ನೀಡುವಂತೆ ಕಲಾ ಪ್ರಪಂಚದ ಉಳಿದ ಮಾಧ್ಯಮಗಳು ಮಾಡಲಾರವು. ಕರ್ನಾಟಕದ ಮೂಲೆಮೂಲೆಯಲ್ಲಿ ಜಾನಪದ, ವೃತ್ತಿ ಹಾಗೂ ಹವ್ಯಾಸಿ ರಂಗಭೂಮಿ ಈ ದೃಷ್ಟಿಯಿಂದ ಹಲವಾರು ವರ್ಷಗಳಿಂದ ತನ್ನ ಜೀವಂತಿಕೆಯನ್ನು ಉಳಿಸಿಕೊಂಡು ಬಂದಿದೆ. ಪ್ರಯೋಗದಿಂದ ಪ್ರಯೋಗಕ್ಕೆ ಬದಲಾಗುತ್ತ ಬೆಳೆಯುತ್ತ, ಹೊಸಹೊಸದಾಗುತ್ತ ಸಾಗುವ ಸಜೀವ ರಂಗಕಲೆಯನ್ನು ದಾಖಲೆಯ ಕಟ್ಟುಪಾಡಿಗೆ ಸಿಲುಕಿಸುವುದು ಬಲು ಕಷ್ಟದ ಕೆಲಸ.

ಮೊದಲಿನಿಂದಲೂ ಇತಿಹಾಸವನ್ನು ರಕ್ಷಿಸುವ ನಿಟ್ಟಿನಲ್ಲಿ ನಮ್ಮವರು ಯೋಚಿಸಿದ್ದೇ ಕಡಿಮೆ. ಹೀಗಾಗಿ ಅಸಂಖ್ಯ ರಂಗ ಕಲಾವಿದರ ಬದುಕು ಇತಿಹಾಸದ ಪುಟಗಳಲ್ಲಿ ಸೇರಿ ಕಾಲ ಕಳೆದಂತೆ ಮಸಕಾಗುತ್ತ ಹೋದದ್ದು ಸಹಜ. ಈಗಲಾದರೂ ನಾವು ಲಭ್ಯವಿರುವ, ಲಭ್ಯವಾಗುವ ಎಲ್ಲ ವಿವರಗಳನ್ನು ಸಂಗ್ರಹಿಸಿ, ಈಗ ನಮ್ಮೊಡನಿರುವ ಕಲಾವಿದರ ಬದುಕಿನ ವರ್ಣಮಯ ನೆನಪುಗಳನ್ನು ಇತಿಹಾಸದ ಅರ್ಥಪೂರ್ಣ ಪುಟಗಳನ್ನಾಗಿ ಪರಿವರ್ತಿಸಲು ಯತ್ನಿಸುವುದು ಅಗತ್ಯವಾಗಿ ಆಗಬೇಕಾದ ಕಾರ್ಯ.

ಕರ್ನಾಟಕ ನಾಟಕ ಅಕಾಡೆಮಿಯ ಉತ್ಸಾಹಿ ಅಧ್ಯಕ್ಷರಾದ ಸಿ. ಜಿ. ಕೃಷ್ಣಸ್ವಾಮಿಯವರ ಒತ್ತಾಸೆ ಹಾಗೂ ಎಲ್ಲ ಸದಸ್ಯರ ಸಕ್ರಿಯ ಸಹಕಾರದ ಮೇರೆಗೆ ಈ ಸಲದ ಅಕಾಡೆಮಿ ಈ ಕಾರ್ಯದಲ್ಲಿ ದಿಟ್ಟ ಹೆಜ್ಜೆ ಇಟ್ಟಿದೆ. ನಮ್ಮೊಡನಿರುವ ರಂಗಕರ್ಮಿಗಳ ಬಗ್ಗೆ ರಂಗಸಂಪನ್ನರು ಎಂಬ ಮಾಲಿಕೆಯಲ್ಲಿ ಕಿರು ಜೀವನ ಚರಿತ್ರೆಯ ಕೆಲವು ಪುಸ್ತಿಕೆಗಳನ್ನು ಈಗಾಗಲೇ ಪ್ರಕಟಿಸಿದೆ.

ನಾಟಕ ಮೂಲತಃ ಪ್ರದರ್ಶಕ ಕಲೆಯಾದರೂ ಸಾಧ್ಯವಿದ್ದಷ್ಟು ಮಟ್ಟಿಗೆ ಅದನ್ನು ಸಾಹಿತ್ಯ, ಬರವಣಿಗೆ, ವಸ್ತುಸಂಗ್ರಹಣೆ, ವಿಡಿಯೋ ಚಿತ್ರೀಕರಣ, ಧ್ವನಿಮುದ್ರಣ, ನೆನಪು ಸಂಗ್ರಹ ಮುಂತಾದ ರೀತಿಯಲ್ಲಿ ದಾಖಲಿಸುವ ಪ್ರಯತ್ನ ಆಗಬೇಕಾಗಿದೆ. ನಮ್ಮ ರಂಗಭೂಮಿಯ ನಟರು, ನಾಟಕಕಾರರು, ನಿರ್ದೇಶಕರು, ರಂಗಸಂಗೀತಗಾರರು, ಹಿನ್ನೆಲೆ ರಂಗಕರ್ಮಿಗಳು ಮುಂತಾದವರು ಮಾಡಿದ ಐತಿಹಾಸಿಕ ಕೆಲಸಗಳು ಜೀವಂತವಾಗಿ ಆಸಕ್ತ ಓದುಗರಿಗೆ, ಚರಿತ್ರೆಕಾರರಿಗೆ ಲಭಿಸುವಂತಾಗಬೇಕು. ಆಗ ಕತ್ತಲೆಗೆ ಸಂದ ನಾಟಕ ಸಾಹಿತ್ಯ ಹಾಗೂ ಪ್ರಯೋಗಗಳ ಎಷ್ಟೋ ಪುಟಗಳು ಮತ್ತೆ ಬೆಳಕಿಗೆ ಬರುವುದರಲ್ಲಿ ಸಂಶಯವಿಲ್ಲ. ಈಗ ಪ್ರಕಟವಾಗುತ್ತಿರುವ ಈ ಕೃತಿಗಳು ಆಯಾ ರಂಗಸಂಪನ್ನ ಕಲಾವಿದರ ಬಗ್ಗೆ ಕೇವಲ ದಿಕ್ಸೂಚಿಯಂತಿವೆ. ಅವರನ್ನು ಕುರಿತು ಇನ್ನೂ

ಎಷ್ಟೋ ವಿಷಯಗಳು, ವಿವರಣೆಗಳು ಹೊರಬರಬೇಕು, ಪ್ರಕಟಗೊಳ್ಳಬೇಕು. ಅಂಥ ಕಾರ್ಯಕ್ಕೆ ಈಗಿನ ಈ ಪ್ರಕಟಣೆಗಳು ನಾಂದಿ ಹಾಗೂ ಪ್ರೇರಕ ರಚನೆಗಳು ಎಂಬುದನ್ನು ಮರೆಯಲಾಗದು. ಇಲ್ಲಿ ನಮೂದಿಸಲಾದ ವಿವರಗಳಿಗೆ ಹಾಗೂ ವ್ಯಕ್ತವಾದ ಅಭಿಪ್ರಾಯಗಳಿಗೆ ಆಯಾ ಲೇಖಕರೇ ಹೊಣೆಗಾರರೆಂಬುದನ್ನು ಬೇರೆ ಹೇಳಬೇಕಾಗಿಲ್ಲ.

ಇದು ಎಂ. ವಿ. ವಾಸುದೇವರಾವ್ ಅವರನ್ನು ಕುರಿತು ಎನ್. ಕೆ. ಹನುಮಂತಯ್ಯ ಅವರು ಬರೆದ ಪುಸ್ತಕ. ಬಾಲ್ಯದಿಂದಲೇ ನಾಟಕ, ಯಕ್ಷಗಾನ, ಅಭಿನಯದ ಗೀಳನ್ನು ಅಂಟಿಸಿಕೊಂಡಿದ್ದ ವಾಸುದೇವರಾವ್ ಅವರ ಬದುಕು ಕಷ್ಟಗಳ, ಹೋರಾಟಗಳ ಸರಮಾಲೆ. ಶ್ರೀನಿವಾಸ ಅಯ್ಯಂಗಾರರ ಕಂಪನಿ ಬಿಟ್ಟು ಗುಬ್ಬಿ ಕಂಪನಿಗೆ ಸೇರಿದಾಗಿನಿಂದ ವಾಸುದೇವ ರಾವ್ ಅವರ ರಂಗೋತ್ಕರ್ಷ ನಿರಂತರವಾಗಿ ಸಾಗಿತು. ಶಿಸ್ತು, ಪ್ರಯತ್ನ, ನಿಷ್ಠೆಗಳನ್ನು ಬದುಕಿನುದ್ದಕ್ಕೂ ಪಾಲಿಸಿಕೊಂಡು ಬಂದ ಅವರು ಗುಬ್ಬಿ ಕಂಪನಿಯ ಮೇರು ಸ್ತಂಭಗಳಲ್ಲಿ ಒಬ್ಬರಾಗಿದ್ದರು. ಮಿತ್ರರಾದ ಬಿ.ವಿ. ಕಾರಂತರು ನಿರ್ದೇಶಿಸಿದ 'ಚೋಮನ ದುಡಿ'ಯಲ್ಲಿ ಅಭಿನಯಿಸಿ ವಾಸುದೇವರಾವ್ ಒಮ್ಮೆಲೇ ಭಾರತದ ಬೆಳ್ಳಿತೆರೆಯ ಮೇಲೆಯೂ ಹೆಸರಾದ ತಾರೆಯೆನಿಸಿದರು. ಹಲವಾರು ಭಾಷೆಗಳ ನಿರ್ದೇಶಕರು, ನಿರ್ಮಾಪಕರು ಅವರ ಅಭಿನಯ, ಪ್ರತಿಭೆಗಳನ್ನು ಬಳಸಿಕೊಂಡರು. ಸಾಕಷ್ಟು ಪ್ರಶಸ್ತಿ - ಪುರಸ್ಕಾರಗಳ ಮಧ್ಯೆಯೂ ತಮ್ಮ ಅಕಿಂಚನತೆಯನ್ನೇ ಪ್ರೀತಿಸಿದ ವಾಸುದೇವರಾವ್ ಕನ್ನಡ ರಂಗಭೂಮಿ ಕಂಡ ಅಪರೂಪದ ಕಲಾವಿದ.

ಈ ಮಾಲಿಕೆಯ ಪುಸ್ತಕಗಳನ್ನು ಸಕಾಲದಲ್ಲಿ ಬರೆದು ಕೊಟ್ಟ ಎಲ್ಲ ಲೇಖಕರಿಗೆ ಹಾಗೂ ನಾಟಕ ಅಕಾಡೆಮಿಯ ಮೂಲಕ ಅವನ್ನು ಪ್ರಕಟಿಸುವಲ್ಲಿ ಎಲ್ಲ ರೀತಿಯಿಂದ ನೆರವಾದ ಆತ್ಮೀಯರಾದ ಸಿ. ಜಿ. ಕೆ., ಕೆ. ವಿ. ನಾಗರಾಜಮೂರ್ತಿ, ಹೂಲಿ ಶೇಖರ್. ಟಿ. ರಘು ಮತ್ತು ಬಿ. ಟಿ. ಮುನಿರಾಜಯ್ಯ ಹಾಗೂ ಮನೋಹರ ಮುದ್ರಣಾಲಯದ ರವಿ- ಚಂದ್ರು, ರಕ್ಷಾಪುಟದ ವಿನ್ಯಾಸ ಮಾಡಿಕೊಟ್ಟ ಕೃಷ್ಣ ರಾಯಚೂರು ಅವರನ್ನು ಪ್ರೀತಿಯಿಂದ ನೆನೆಯುತ್ತೇನೆ.

ಬೆಂಗಳೂರು<br>೧೦-೨-೨೦೦೧

ಸಿದ್ದಲಿಂಗ ಪಟ್ಟಣಶೆಟ್ಟಿ<br>ಸಂಪಾದಕ ಸಮಿತಿಯ ಪರವಾಗಿ

# ಪರಿವಿಡಿ


| | |
|---|---|
| ೧. ಮೇಷ್ಟ್ರ ಮನೆ | ೯ |
| ೨. ಬೇಬಿ | ೧೦ |
| ೩. ಶ್ರೀನಿವಾಸ ಅಯ್ಯಂಗಾರ್ | ೧೧ |
| ೪. ಗುಬ್ಬಿ ಕಂಪನಿಗೆ ಪ್ರವೇಶ | ೧೨ |
| ೫. ಹೈದರಾಬಾದ್‌ಗೆ ಪ್ರಯಾಣ | ೧೭ |
| ೬. ಕೆ. ಹಿರಣ್ಣಯ್ಯನವರ ಕಂಪನಿಗೆ ಪ್ರವೇಶ | ೧೮ |
| ೭. ಮರಳಿ ಗೂಡಿಗೆ | ೧೯ |
| ೮. ಮದುವೆ | ೨೩ |
| ೯. ಗುಬ್ಬಿ ವೀರಣ್ಣನವರ ಮರಣ | ೨೬ |
| ೧೦. ಬಿ. ವಿ. ಕಾರಂತರ ಜೊತೆ | ೨೭ |
| ೧೧. ಚೋಮನ ದುಡಿ | ೨೮ |
| ೧೨. ಮೃಣಾಲ್ ಸೇನ್‌ರೊಂದಿಗೆ | ೩೨ |
| ೧೩. ವಾಸುದೇವರಾವ್ ಜೊತೆ ಕೆಲವು ಮಾತುಗಳು | ೩೮ |

# ಮೇಷ್ಟ್ರ ಮನೆ

ಮೊದಲಿಗೆ ನಾವೆಲ್ಲ ಈ ಮೇಷ್ಟ್ರಿಗೆ ನಮಿಸೋಣ. ಇಷ್ಟು ಶಿಸ್ತಿನ ಮನುಷ್ಯ. ಅವರ ನಡೆ ನುಡಿ ಎಲ್ಲವೂ ಗಂಭೀರ, ಸದಾ ನೀಟಾದ ಉಡುಪು ಧರಿಸಿ ತಿರುಗಾಡುವ ಈ ವ್ಯಕ್ತಿಗೆ ಊರಿನಲ್ಲೆಲ್ಲ ಎಷ್ಟೊಂದು ಗೌರವವಿದೆ. ಬನ್ನಿ, ಇವರ ಹೆಸರು ಕೇಳೋಣ, ಬಿ. ವೆಂಕಟರಾವ್, ಬೋರ್ಡ್ ಸ್ಕೂಲಿನ ಮೇಷ್ಟ್ರು, ಇಂಗ್ಲೀಶ್ ಮತ್ತು ಸಂಸ್ಕೃತದ ಪಂಡಿತರು. ಇವರು ಮೇಧಾವಿ.

ಇವರಿಗೆ ಬರುವ ಸಂಬಳ ತೀರಾ ಕಡಿಮೆ. ಅದಕ್ಕೇ ಇರಬೇಕು ಸುತ್ತಮುತ್ತಲ ಜನ ಇವರನ್ನು ಬಡಮೇಷ್ಟ್ರು ಎಂದು ಅನುಕಂಪದಿಂದ ಕಾಣುತ್ತಿದ್ದಾರೆ. ಇವರ ಸ್ಕೂಲಿನ ಮಕ್ಕಳು ತಮ್ಮ ಜಮೀನಿನಲ್ಲಿ ಬೆಳೆದ ದವಸ ಧಾನ್ಯಗಳಲ್ಲಿ ಸ್ವಲ್ಪವನ್ನು ಇವರಿಗೂ ತಂದುಕೊಡುತ್ತಿರುವುದರಿಂದ ಮೇಷ್ಟ್ರ ಸಂಸಾರ ಹೇಗೋ ನಡೆಯುತ್ತಿದೆ.

ವೆಂಕಟರಾವ್ ಮೇಷ್ಟ್ರಿಗೆ ಮದುವೆಯಾಗಿದೆ. ಅಗೋ ನೋಡಿ, ಕಾಣುತ್ತಿದ್ದಾರಲ್ಲ ಕಮಲಾಬಾಯಿ, ಅವರೇ ಮೇಷ್ಟ್ರ ಧರ್ಮಪತ್ನಿ. ಇವರದು ಬ್ರಾಹ್ಮಣ ಕುಟುಂಬ. ಬನ್ನಿ ಮನೆಗೆ ಕಾಲಿಡೋಣ. ಅರೆ ಹಾರ್ಮೋನಿಯಂ ! ಓ, ನಮ್ಮ ಮೇಷ್ಟ್ರು ಭಜನೆಯನ್ನೂ ಮಾಡುತ್ತಾರೆ. ಅಷ್ಟೇ ಅಲ್ಲ ಸ್ವಾಮಿ, ಇವರು ಬಿಡುವಾದಾಗ ಅಂಗಳದಲ್ಲಿ ಕೂತು ಮಣ್ಣಿನಿಂದ ಗಣೇಶನ ವಿಗ್ರಹವನ್ನೂ ಮಾಡುತ್ತಾರೆ. ಪಾಪ, ಕಮಲಾಬಾಯಿಯವರು ಕೇವಲ ಮನೆಕೆಲಸದಲ್ಲೇ ಮುಳುಗಿದ್ದಾರೆ. ಅನಾರೋಗ್ಯದ ತಾಯಿ.

ನಮ್ಮ ಮೇಷ್ಟ್ರು ಸ್ಕೂಲಿನಲ್ಲಿ ಬರೀ ಪಾಠ ಮಾಡಿ ತೆಪ್ಪಗಿರುತ್ತಾರೆಯೇ, ಇಲ್ಲ, ಸಣ್ಣ ಪುಟ್ಟ ನಾಟಕಗಳನ್ನೂ ಬರೆದು ಆಡಿಸುತ್ತಾರೆ. ಸ್ವತಃ ಪಾತ್ರವನ್ನೂ ಮಾಡುತ್ತಾರೆ. ಯಕ್ಷಗಾನವೆಂದರೆ ಮೈ ಮರೆಯುತ್ತಾರೆ.

ಆ ಮೂಲೆಯಲ್ಲಿ ಕೂತಿರುವ ಮಕ್ಕಳನ್ನು ಯಾರೆಂದು ಭಾವಿಸಿದಿರಿ, ಅವರೆಲ್ಲ ನಮ್ಮ ಮೇಷ್ಟ್ರು ಮಕ್ಕಳು. ಬನ್ನಿ ಅವರ ಹೆಸರು ಕೇಳೋಣ.

೧. ಮೋಹನ್‌ರಾವ್
೨. ವಾಸುದೇವರಾವ್
೩. ಪಾಂಡುರಂಗರಾವ್
೪. ರಾಜಗೋಪಾಲ್‌ರಾವ್
೫. ಲಲಿತಾ ಬಾಯಿ
೬. ವರದಾ.

ಒಟ್ಟು ಆರು ಮಂದಿ. ಇವರಿಗೆಲ್ಲ ಅಪ್ಪನನ್ನು ಕಂಡರೆ ತೀರಾ ಭಯ. ಮೇಷ್ಟ್ರು ಉಸಿರಾಟದ ಸದ್ದಿಗೂ ಈ ಮಕ್ಕಳು ನಡುಗುತ್ತವೆ. ಆದರೆ ನಮ್ಮ ಮೇಷ್ಟ್ರೇನೂ ಕಟುಕರಲ್ಲ ಬಿಡಿ. ಪ್ರೀತಿ, ವಾತ್ಸಲ್ಯದ ಮೂರ್ತಿ,

ನಾವೀಗ ನಮಗೆ ಬೇಕಾದ ಹುಡುಗನನ್ನು ಮಾತನಾಡಿಸುತ್ತ ಈ ಕಾಲದ ಹಕ್ಕಿಯೇರಿ ಹಾರೋಣವೇ. ನಡೆಯಿರಿ.

# ಬೇಬಿ

ಎಷ್ಟು ಬೆಳ್ಳಗಿದ್ದಾನೆ ! ತುಂಬಾ ಮೌನಿಯಲ್ಲವೆ ? ಇವನು ಹುಟ್ಟಿದ್ದು ೧೯೧೯ ಆಗಸ್ಟ್ ೧೯ ರಂದು. ಇಲ್ಲೇ ಮೂಡುಬಿದ್ರೆಯಲ್ಲೇ ಹುಟ್ಟಿದ.

ಇವನೂ ಶಾಲೆಗೆ ಹೋಗುತ್ತಿದ್ದಾನೆ. ಮೂರನೇ ತರಗತಿಯಲ್ಲಿ ಓದುತ್ತಿದ್ದಾನೆ. ಎಲ್ಲರೂ ಈತನನ್ನು ಬೇಬಿ... ಬೇಬಿ.... ಎಂದೇ ಕರೆಯುತ್ತಾರೆ. ವಾಸುದೇವರಾವ್ ಅಂತ ಕರೆಯುವವರು ಅತಿ ವಿರಳ. ಈತ ಎಲ್ಲೇ ಯಕ್ಷಗಾನದ ಸದ್ದು ಕೇಳಲಿ ಅಲ್ಲಿಗೆ ಹಾಜರಾಗುತ್ತಾನೆ. ಬೆರಗಿನಿಂದ ನೋಡುತ್ತಾನೆ. ಮನೆಯಲ್ಲೂ ಅಷ್ಟೇ, ತಂದೆ ಹೇಳುವ ಕಥೆ, ಭಜನೆ ಎಲ್ಲವನ್ನೂ ಆಸಕ್ತಿಯಿಂದ ಆಲಿಸುತ್ತಾನೆ. ಓದುವುದಕ್ಕಿಂತ ಇವನಿಗೆ ಕಲೆಯ ಬಗ್ಗೆಯೇ ಧ್ಯಾನ.

ಮೇಷ್ಟ್ರಿಗೆ ಮಕ್ಕಳನ್ನು ಓದಿಸುವುದು ಕಷ್ಟವಾಯಿತು. ಕಮಲಾಬಾಯಿಯವರಿಗೆ ಆರೋಗ್ಯ ಕೆಟ್ಟಿತ್ತು. ಏನು ಮಾಡಬೇಕೆಂದು ತೋಚದಂತಾಯ್ತು. ಎಲ್ಲಿಯಾದರೂ ಕೆಲಸಕ್ಕೆ ಸೇರಿಸಿ ಬಿಡಬೇಕೆಂದು ಯೋಚಿಸುತ್ತಿದ್ದರು. ಏನು ಮಾಡುವುದು ಚಿಕ್ಕಮಕ್ಕಳು.

ಸ್ಕೂಲಿನಲ್ಲಿ ಮೇಷ್ಟ್ರು ತಾವೇ ಒಂದು ನಾಟಕ ರಚಿಸಿ ಮಕ್ಕಳಿಂದ ಆಡಿಸಿದರು. ಈ ನಾಟಕದಲ್ಲಿ ಬೇಬಿಯೂ ಪಾತ್ರ ಮಾಡಿದ್ದ. ಇವನು ಮಾಡಿದ ಪಾತ್ರ ಕಂಡು ಮೇಷ್ಟ್ರಿಗೆ ಯಾಕೆ, ಇಡೀ ಜನತೆಗೇ ಆಶ್ಚರ್ಯವಾಯಿತು. ಎಂಥ ಚೂಟಿಯ ಹುಡುಗ, ಯಾರ ತಂಟೆಗೂ ಹೋಗದೆ ತನ್ನ ಪಾಡಿಗೆ ತಾನು ಇರುವ ಸಭ್ಯ. ಈತ ಆಡಿದ ನಾಟಕವನ್ನು ಎಂಥೆಂಥವರು ನೋಡಿದರು ! ಅಂಥವರಲ್ಲಿ ಶ್ರೀನಿವಾಸ ಅಯ್ಯಂಗಾರರೂ ಒಬ್ಬರು.

ಎಂ. ವಿ. ವಾಸುದೇವರಾವ್ : ಎನ್. ಕೆ. ಹನುಮಂತಯ್ಯ

# ಶ್ರೀನಿವಾಸ ಅಯ್ಯಂಗಾರ್

ಇವರು ಗುಬ್ಬಿ ಕಂಪನಿಯಲ್ಲಿ ಇದ್ದಂಥವರು. ಅಲ್ಲಿ ನಾಟಕ ಕಲಿಸುತ್ತಿದ್ದರು. ಸರಿಯಾಗಿ ಕಲಿಯದವರಿಗೆ ಇವರು ಹೊಡೆಯುತ್ತಿದ್ದ ರೀತಿ ವಿಪರೀತವಾಗಿತ್ತು. ಮೈಕೈಯೆಲ್ಲ ಬಾತುಕೊಳ್ಳುವಂತೆ ಬಾರಿಸುತ್ತಿದ್ದರು. ಇವರ ಈ ಭಯಂಕರ ಏಟು ಕೆಲಸ ಕಳೆದುಕೊಳ್ಳುವಂತೆ ಮಾಡಿತು. ಕಂಪನಿಯಿಂದ ಹೊರಬಂದರು. 'ಇಲಿ ಎಲ್ಲಿಗ್ಹೋದ್ರೂ ನೆಲ ಕೆರೆಯೋದು ತಪ್ಪುವುದೇ ?' ಎಂಬಂತೆ ಇವರೊಳಗಿದ್ದ ರಂಗಶಕ್ತಿ ಸುಮ್ಮನೆ ಬಿಡಲಿಲ್ಲ. ಹಾಗಾಗಿ ತಾವೇ ಒಂದು ಕಂಪನಿ ಕಟ್ಟಿದರು. ಆ ಕಂಪನಿಗೆ ಚಿಕ್ಕ ಹುಡುಗರನ್ನು ಹುಡುಕುತ್ತಿರುವಾಗ, ಮೇಷ್ಟ್ರು ಮತ್ತವರ ಮಕ್ಕಳು ನೆನಪಾದರು. ಕೂಡಲೇ ಭೇಟಿ ಮಾಡಿದರು. ಇದೇ ಸಮಯವನ್ನು ಕಾಯುತ್ತಿದ್ದ ಮೇಷ್ಟ್ರು ತಮ್ಮ ಮಕ್ಕಳನ್ನು ಶಾಲೆ ಬಿಡಿಸಿ ಕಂಪನಿಗೆ ಸೇರಿಸಿದರು. ಅಂತೂ ಈ ಬೇಬಿಯ ಕನಸಿಗೆ ಒಂದು ನೆಲೆ ಸಿಕ್ಕಿತು.

ಅಯ್ಯಂಗಾರರ ಕಂಪನಿ ಬಿರುಸಿನಿಂದ ನಡೆಯತೊಡಗಿತು. ಬೇಬಿ ಕಾಲಿಟ್ಟ ಮೂರು ತಿಂಗಳಿನಲ್ಲೇ ಹಲವಾರು ನಾಟಕಗಳು ಸಿದ್ಧವಾದವು. ಅವುಗಳಲ್ಲಿ ಮುಖ್ಯವಾದವುಗಳೆಂದರೆ-

ಕೃಷ್ಣ ಪಾರಿಜಾತ, ಕೃಷ್ಣಲೀಲೆ, ಕಂಸವಧೆ ಅಥವಾ ಯಮಗರ್ವಭಂಗ, ಲಂಕಾದಹನ, ಸಾವಿತ್ರಿ, ಪ್ರಭಾಮಣಿವಿಜಯ, ಕಬೀರದಾಸ್ ಇತ್ಯಾದಿ.

ವಾಸುದೇವರಾವ್ ಎಂಬ ಈ ಹುಡುಗ ಮನ್ಮಥ, ಕೃಷ್ಣ, ಅಂಗದ, ಅಕ್ಷಯಕುಮಾರ, ಕರುಣಿ, ಪ್ರಭಾಮಣಿ, ಕಮಾಲ್ ಮೊದಲಾದ ಪಾತ್ರಗಳನ್ನು ಮಾಡಿದ. ಈತನ ಅಭಿನಯ ತೀವ್ರವಾಗಿರುತ್ತಿತ್ತು. ಸಭಿಕರೆಲ್ಲರ ಮೆಚ್ಚುಗೆ ಗಳಿಸಿದ. ಅಯ್ಯಂಗಾರರ ಪ್ರೀತಿಗೆ ಪಾತ್ರನಾದ. ಈ ಎಲ್ಲ ಅಂಶಗಳು ಈ ಹುಡುಗನ ಆತ್ಮವಿಶ್ವಾಸವನ್ನು ಗಾಢವಾಗಿಸಿದವು.

ಆ ಕಂಪನಿಯಲ್ಲಿ ಬಣ್ಣಬಣ್ಣದ ವಿದ್ಯುತ್ ದೀಪಗಳಿರಲಿಲ್ಲ. ಮೈಕ್ ವ್ಯವಸ್ಥೆಯಿರಲಿಲ್ಲ. ಪರದೆಯೂ ಇರಲಿಲ್ಲ. 'ಗ್ಯಾಸ್ ಲೈಟ್' ಎಂಬುದು ಬೆಳಕಿನ ಏಕೈಕ ಸಾಧನವಾಗಿತ್ತು. ವೈಟ್ ಲೈಡ್, ಜಿಂಕ್ ಮತ್ತು ಕೆಂಪು ಇತ್ಯಾದಿ ಬಣ್ಣಗಳಿಂದ ಮೇಕಪ್ ಮಾಡಿಕೊಳ್ಳುತ್ತಿದ್ದರು. ಮೇಕಪ್ ಮಾಡಲು ಪಳಗಿದವರಾರೂ ಇರಲಿಲ್ಲ ಅವರವರ ಪಾಡಿಗೆ ಅವರು ಬಣ್ಣ ಬಳಿದುಕೊಳ್ಳುತ್ತಿದ್ದರು.'

ಈ ಕಂಪನಿ ತೀರಾ ಹಾನಿಯ ಸ್ಥಿತಿಗೆ ಬಂತು. ಸಂಬಳವಿರಲಿ, ಸರಿಯಾಗಿ ಊಟ ಮಾಡಲೂ ಹಣವಿರದ ಗತಿ ಬಂತು, ಹೊಟ್ಟೆಯ ಹಸಿವು ಒಳಗೊಳಗೇ ಸುಡುತ್ತಿದ್ದರೂ ಮುಖದಲ್ಲಿ ಬಣ್ಣ ಹಚ್ಚಿಕೊಂಡು ಎಷ್ಟು ದಿನ ನಗಲು ಸಾಧ್ಯ ? ನಗಿಸಲು ಸಾಧ್ಯ ? ಒಂದು ವರ್ಷ ಕಾಲ ಹೇಗೋ ಉಸಿರಾಡಿಕೊಂಡಿದ್ದ ಕಂಪನಿ ಕೊನೆಗೆ ನಿಂತಿತು.

## ಗುಬ್ಬಿ ಕಂಪನಿಗೆ ಪ್ರವೇಶ

ಶ್ರೀನಿವಾಸ ಐಯ್ಯಂಗಾರರ ಕಂಪನಿ ಮಣ್ಣುಪಾಲಾದ ನಂತರ ವಾಸುದೇವ್ರಾವ್ ಒಂಟಿಯಾದ. ಶಾಲೆಗೂ ಹೋಗಲಾಗದೆ ಮನೆಯಲ್ಲೂ ಇರಲಾಗದೆ ಕಂಗಾಲಾದ. ತನ್ನೊಳಗೆ ಗಟ್ಟಿಗೊಳ್ಳುತ್ತಿದ್ದ ರಂಗಪ್ರಜ್ಞೆಯನ್ನು ಕೈಬಿಡಲಾರದೆ ಕರಗತೊಡಗಿದ. ಆದರೆ ಅವನೊಳಗೆ ಆಶಾವಾದವಿತ್ತು. ಎಂದಾದರೂ ನನ್ನ ನಂಬಿಕೆ ಫಲಿಸುವುದೆಂದು ಕಾದ.

ಹೀಗಿರುವಾಗ ಕನ್ನಡ ನಾಡಿನ ಮನೆಮನೆಗೂ ತಲುಪಿದ್ದ ಗುಬ್ಬಿ ಕಂಪನಿ ಮೂಡುಬಿದ್ರೆಗೂ ತಲುಪಿ ಹೆಸರಾಗಿತ್ತು. ಅದೊಂದು ಬೃಹತ್ ರಂಗಕೇಂದ್ರವಾಗಿತ್ತು. ಚಲಿಸುವ ರಂಗ ವಿಶ್ವವಿದ್ಯಾಲಯವೆಂದೇ ಖ್ಯಾತಿ ಪಡೆದಿತ್ತು. ಏಕೆಂದರೆ ಆ ಕಾಲದಲ್ಲಿ ಜನರ ಮನರಂಜನೆಯ ಮುಖ್ಯ ಮಾಧ್ಯಮ ನಾಟಕವೇ ಆಗಿತ್ತು. ಒಂದು ಸಂಸ್ಥೆ ಒಳಗೊಂಡಿರುವ ಎಲ್ಲಾ ಬಗೆಯ ನೀತಿ ನೇಮಗಳು ಅಲ್ಲಿದ್ದವು. ಆ ಕಂಪನಿಯಲ್ಲಿ ಕೆಲಸ ಮಾಡುವುದೆಂದರೆ ಅನೇಕರಿಗೆ ಹೆಮ್ಮೆಯ ವಿಷಯವಾಗಿತ್ತು. ಮಹಾನ್ ಕಲಾವಿದರೆಲ್ಲ ಅಲ್ಲಿದ್ದರು.

ಶಾಲಿವಾಹನ ಮಂಜುನಾಥ್ ಎಂಬುವರು ವಾಸುದೇವರಾವ್‌ನನ್ನು ನೋಡಿದ್ದರು. ಆತನ ಅಭಿನಯದಲ್ಲಿ ಯಾವುದೋ ವಿಶಿಷ್ಟ ಅಂಶವನ್ನು ಗುರುತಿಸಿದ್ದರು. ಈ ಕಾರಣದಿಂದ ಮನೆಯ ಕಡೆ ಇದ್ದವನನ್ನು ಮೇಷ್ಟ್ರಿಗೆ ಒಪ್ಪಿಸಿ ತನ್ನೊಡನೆ ಕರೆದುಕೊಂಡು ಹೊರಟರು.

ಅದು ೧೯೨೮ ರ ಸಮಯ. ಗುಬ್ಬಿ ಕಂಪನಿ ದಸರಾ ಹಬ್ಬದ ಪ್ರಯುಕ್ತ ಮೈಸೂರಿನಲ್ಲಿ ಬೀಡುಬಿಟ್ಟಿತ್ತು. 'ರಾಜಭಕ್ತಿ' ಎಂಬ ನಾಟಕವನ್ನು ಪ್ರದರ್ಶಿಸುತಿತ್ತು. ಅಲ್ಲಿಗೆ ಮಂಜುನಾಥರು ಈತನನ್ನು ಕರೆದುಕೊಂಡು ಬಂದರು. ಕಂಪನಿಗೆ ಸೇರಿಸಿದರು. ವಾಸುದೇವರಾವ್‌ನ ಎಳೆಯ ಮನಸ್ಸು ಹಿರಿಹಿರಿ ಹಿಗ್ಗಿತು. ಪ್ರತಿಷ್ಠಿತ

ಕಂಪನಿಯಲ್ಲಿ ಅವಕಾಶ ಸಿಕ್ಕಿದ್ದಕ್ಕೆ ಕುಣಿದಾಡಿತು. ಊರು, ತಂದೆ, ತಾಯಿ, ಎಲ್ಲರನ್ನೂ ತೊರೆದು ಬಂದ ಸಂಕಟ ಆರಂಭದಲ್ಲಿ ಕಾಡಿತು. ಕ್ರಮೇಣ ಹೊಂದಿಕೊಂಡಿತು.

ಅವರ ಹೆಸರು ಗುಬ್ಬಿ ಕಂಪನಿಯಲ್ಲಿ ಹಾಜರಾತಿಯಲ್ಲಿ ವಾಸುದೇವರಾವ್ ಎಂದು ದಾಖಲಾಯಿತಷ್ಟೆ. ಆದರೆ ಅವರ ಬೇಬಿ ಎನ್ನುವ ಅಡ್ಡಹೆಸರೇ ಇಲ್ಲೂ ಮುಂದುವರಿಯಿತು.

ಗುಬ್ಬಿ ಕಂಪನಿಯನ್ನು ನೋಡಿ, ಹೇಗೆ ಒಂದು ಸಂಸ್ಥೆಯಂತಿದೆ. ಸಂಸ್ಥೆಗಳಿಗಿರುವ ಶಿಸ್ತುಗಳು ಇಲ್ಲೂ ಇವೆ. ಕಲೆಯನ್ನು ಈ ರೀತಿ ಶಿಸ್ತಿಗೆ ತಂದು ಬೆಳೆಸಿದವರು ಯಾರಿದ್ದಾರೆ ಬಿಡಿ ನಮ್ಮ ವೀರಣ್ಣನವರನ್ನು ಬಿಟ್ಟರೆ, ಈ ಕಂಪನಿಯಲ್ಲಿ ಅಕ್ಷರ ಕಲಿಸುವ ಉಪಾಧ್ಯಾಯರಿದ್ದಾರೆ. ಮಾಂತ್ರಿಕ ಶಕ್ತಿಯಲ್ಲಿ ಅಂದರೆ ಬಹಳ ಚೆನ್ನಾಗಿ ಹಾರ್ಮೋನಿಯಂ ನುಡಿಸುವ ಪಾಪಣ್ಣನವರು, ಪ್ರೇಕ್ಷಕರನ್ನೂ ಒಮ್ಮೆ ಕುಣಿಸಿಬಿಡುವ ನೃತ್ಯಗಾರರಾದ ಮಹಾಬಲರಾವ್, ಹಾಡುಗಾರಿಕೆಯಲ್ಲಿ ಹೆಸರಾದ ಜಿ. ನಾಗೇಶ್‌ರಾವ್, ರಾಜನ ಪಾತ್ರ ಮಾಡುತ್ತಿದ್ದ ಗುರುಮೂರ್ತಪ್ಪ, ರಾಕ್ಷಸನ ಪಾತ್ರ ಮಾಡುತ್ತಿದ್ದ ಎಂ. ಎನ್. ಗಂಗಾಧರರಾವ್, ಹೆಂಗಸಿನ ಪಾತ್ರದಲ್ಲಿ ಹದಿಹರೆಯದವರಲ್ಲಿ ಮಿಂಚು ಹುಟ್ಟಿಸುತ್ತಿದ್ದ ನಾರಾಯಣ ನಾಯ್ಡು, ಉಡುಪಿ ವ್ಯಾಸರಾವ್, ಸೋಮಾಜಿರಾವ್ ಹಾಗೂ ರಾಮಚಂದ್ರರಾವ್ ಎಂಬ ನೃತ್ಯ ಜೋಡಿ, ಚಿತ್ರನಟ ಲೋಕೇಶ್ ಅವರ ತಂದೆ ಸುಬ್ಬಯ್ಯ ನಾಯ್ಡು, ಹಾಸ್ಯಪಾತ್ರದ ಮಹಾಬಲರಾವ್, ಶಂಕರನಾರಾಯಣರಾವ್, ಶಕುನಿಪಾತ್ರದ ಬಸವರಾಜಪ್ಪ, ಕೋದಂಡನ ಪಾತ್ರದ ಸಿದ್ದಲಿಂಗದೇವರು ಮೊದಲಾದ ಘಟಾನುಘಟಿಗಳಿದ್ದ ಗುಬ್ಬಿ ಕಂಪನಿ ವಾಸುದೇವರಾವ್‌ರಿಗೆ ಹಿಡಿಸಿತು.

ಆರಂಭದಲ್ಲಿ ಮನೆ, ತಂದೆ ತಾಯಿಗಳನ್ನು ಬಿಟ್ಟು ಬಂದ ಯಾತನೆ ಕಾಡಿದರೂ ಇವರೊಳಗಿದ್ದ ಮಹತ್ವಾಕಾಂಕ್ಷೆ ಎಲ್ಲವನ್ನೂ ಮರೆತು ಕಲೆಯಲ್ಲಿ ಪಳಗುವ ಕಡೆ ಮನಸ್ಸು ಮಾಡಿತು. ಹಿರಿಯ ಕಲಾವಿದರಿಗಿದ್ದ ಪ್ರತಿಭೆಯ ಪ್ರಖರತೆಗೆ ತನ್ನನ್ನು ತಾನು ಒಡ್ಡಿಕೊಂಡು ಬೆಳೆಯಲಾರಂಭಿಸಿದರು.

ಕಂಪನಿಯೊಳಗೂ ಜಾತಿಯ ಕಟ್ಟುನಿಟ್ಟುಗಳಿದ್ದವು. ಸುಮಾರು ಎಂಭತ್ತು ತೊಂಭತ್ತು ಜನರಿಂದ ಕೂಡಿದ್ದ ಈ ಕಂಪನಿ ಒಂದು ಪುಟ್ಟ ಊರಿನಂತೆಯೆ ಇತ್ತು. ಇಲ್ಲೂ ಎಲ್ಲಾ ಜಾತಿಯವರೂ ಕೆಲಸ ಮಾಡುತ್ತಿದ್ದರು. ಬ್ರಾಹ್ಮಣ ಮತ್ತು ಲಿಂಗಾಯತ ಕೋಮಿನವರೇ ಹೆಚ್ಚಾಗಿದ್ದರು.

ಕಂಪನಿ ಬೀಡುಬಿಟ್ಟ ಸ್ಥಳಗಳಲ್ಲಿ ಎರಡು ಮನೆಗಳನ್ನು ಬಾಡಿಗೆಗೆ ಗೊತ್ತು ಮಾಡಲಾಗುತ್ತಿತ್ತು. ಒಂದು ಬ್ರಾಹ್ಮಣರಿಗೆ, ಮತ್ತೊಂದು ಲಿಂಗಾಯತರಿಗೆ, ಆಯಾಮ ಜಾತಿಯವರಿಗೆ ಪ್ರತ್ಯೇಕವಾಗಿ ನೀರು ಕಾಯಿಸುವವರು, ಅಡಿಗೆ ಮಾಡುವವರು ನೇಮಕಗೊಂಡಿದ್ದರು. ಗೇಟ್ ಕೀಪರ್‌ನಿಂದ ಹಿಡಿದು ಮ್ಯಾನೇಜರು, ಅಕೌಂಟೆಂಟ್ ಇತ್ಯಾದಿ ಎಲ್ಲರೂ ಇದ್ದರು. ಈ ಕಂಪನಿಯಲ್ಲಿ ಪ್ರಭುತ್ವವಿರೋಧಿ ಧ್ವನಿ ಇರಲಿಲ್ಲ. ರಾಜರಿಗೆ ನಿಷ್ಠರಾಗಿದ್ದುಕೊಂಡು ತಮ್ಮ ಕಂಪನಿಯನ್ನು ಬೆಳೆಸುತ್ತಿದ್ದರು. ನಾಗೇಶ್‌ರಾಯರು ಪ್ರ್ಯಾಕ್ಟೀಸ್ ಮ್ಯಾನೇಜರರಾಗಿದ್ದರು. ಬೆಳಿಗ್ಗೆ ೧೦ ರಿಂದ ೧೨ ರ ವರೆಗೆ ತರಬೇತಿ ನಡೆಯುತ್ತಿತ್ತು. ಪ್ರತಿ ದಿನ ಪ್ರ್ಯಾಕ್ಟೀಸ್ ವಿವರಗಳನ್ನು ಫಲಕದಲ್ಲಿ ನಮೂದಿಸಲಾಗುತ್ತಿತ್ತು. ಸರಿಯಾದ ಸಮಯಕ್ಕೆ ಎಲ್ಲರೂ ಹಾಜರಾಗುತ್ತಿದ್ದರು. ಕಲಿಯುತ್ತಿದ್ದರು.

ಈ ರೀತಿಯ ದಿನಚರಿಯಿಂದ ವಾಸುದೇವರಾವ್‌ಗೆ ಒಂದು ಶ್ರದ್ಧೆ, ಶಿಸ್ತು, ಅಧ್ಯಯನದ ಮನಸ್ಸು ಒದಗಿತು. ವೀರಣ್ಣ ಮತ್ತು ಅವರ ಪತ್ನಿ ಸುಂದರಮ್ಮನವರ ಪ್ರೋತ್ಸಾಹ ಸದಾ ಸಿಗುತ್ತಿತ್ತು. ಹಗಲು ನಿದ್ದೆ, ರಾತ್ರಿ ಎಚ್ಚರ ಇವರ ಜೀವನ ಕ್ರಮವಾಗಿತ್ತು. ಇದು ಎಲ್ಲ ರಂಗಕರ್ಮಿಗಳ ಸ್ಥಿತಿಯೂ ಹೌದು. ತಿಂಡಿಗಾಗಿ ಒಂದೂ ಮುಕ್ಕಾಲು ರೂಪಾಯಿ ಕೊಡುತ್ತಿದ್ದರು. ಹೇಗೋ ಸಾಕಾಗುತ್ತಿತ್ತು. ಆಗ ವಾಸುದೇವರಾವ್‌ಗೆ ಎಂಟು ರೂಪಾಯಿ ಸಂಬಳ ಕೊಡುತ್ತಿದ್ದರು. ಅದೂ ಸಹ ನೇರವಾಗಿ ತನ್ನ ಕೈ ತಲುಪುತ್ತಿರಲಿಲ್ಲ. ತಂದೆಗೆ ಸೇರುತ್ತಿತ್ತು. ಇದರ ಬಗ್ಗೆ ಅಸಮಾಧಾನವಿರಲಿಲ್ಲ...

ವಾಸುದೇವರಾವ್ ಈ ಕಂಪನಿಗೆ ಕಾಲಿಟ್ಟಾಗ ಅದು ಆಗಲೇ ಸಿಲ್ವರ್ ಜ್ಯೂಬಿಲಿ ಆಚರಿಸಿಕೊಂಡಿತ್ತು. ಎರಡು ವರ್ಷಗಳ ಕಾಲ ಬಾಲನಟನಾಗಿಯೇ ವೀರಣ್ಣನವರ ಗರಡಿಯಲ್ಲಿ ಕಳೆದ ಇವರು, ಗುಬ್ಬಿ ಕಂಪನಿಯ ಮತ್ತೊಂದು ಶಾಖೆಗೆ ವರ್ಗಗೊಂಡರು. ತರೀಕೆರೆಯಿಂದ ಈ ಶಾಖೆಗೆ ಕಳುಹಿಸಿದರು.

ಈ ಶಾಖೆಯಲ್ಲಿ ಬಹುಪಾಲು ಚಿಕ್ಕ ಹುಡುಗರೇ ಇದ್ದರು. ಈ ಮಕ್ಕಳಿಂದಲೇ ನಾಟಕಗಳಾಗುತ್ತಿದ್ದವು. ಇಲ್ಲಿಗೆ ದಾಖಲಾದ ವಾಸುದೇವರಾವ್‌ಗೆ ತನ್ನ ಕಲಾ ಜೀವನದ ಮಹತ್ವದ ಘಟ್ಟವೊಂದು ದೊರೆತಂತಾಯಿತು. ಇವರ ಜೊತೆ ಹಲವಾರು ಗೆಳೆಯರು ಆ ಶಾಖೆಯಲ್ಲಿದ್ದರು. ಅವರಲ್ಲಿ ನೆನಪಾಗುತ್ತಿರುವವರೆಂದರೆ

ಪುಟ್ಟಬಸಪ್ಪ, ದೇವಶೆಟ್ಟಿ, ಮುನಿಯಪ್ಪ, ಚಿಕ್ಕಮಹಾದೇವ, ವ್ಯಾಸರಾವ್, ಕೃಷ್ಣಮೂರ್ತಿ, ಬಿ. ಎನ್, ಚೆನ್ನಪ್ಪ, ಶ್ರೀಕಂಠಾಚಾರ್, ನಾರಾಯಣಸ್ವಾಮಿ,

ಚಿಕ್ಕಮುನಿಶಾಮಣ್ಣ, ದೊಡ್ಡಮುನಿಶಾಮಣ್ಣ, ಕೆ. ಹಿರಣ್ಣಯ್ಯ, ಕಳಸಪ್ಪ - ಮುಂತಾದವರು.

ವಾಸುದೇವರಾವ್ ಮಾಡುತ್ತಿದ್ದ ಪಾತ್ರಗಳು ಅಪಾರವಾಗಿದ್ದವು. ಹೆಚ್ಚಾಗಿ ಬಾಲನಟ ಮತ್ತು ಗುಂಪಿನ ಪಾತ್ರಗಳೇ ಸಿಕ್ಕುತ್ತಿದ್ದವು. ಅಂಥ ಪಾತ್ರಗಳಲ್ಲಿ ಗಮನಾರ್ಹವಾದವುಗಳೆಂದರೆ; ಬಾಲಕೃಷ್ಣ, ಮನ್ಮಥ, ಪ್ರಭಾಮಣಿ ಇತ್ಯಾದಿ.

ಇದೇ ಸಂದರ್ಭದಲ್ಲಿ ಆ ಕಾಲದಲ್ಲಿ ಇತರೆ ಕಂಪನಿಗಳೂ ಅಸ್ತಿತ್ವದಲ್ಲಿದ್ದವು. ಅವು ಹೆಚ್ಚು ಸಾಮಾಜಿಕ ನಾಟಕಗಳಿಗೆ ಒತ್ತು ಕೊಡುತ್ತಿದ್ದವು. ಪ್ರಭುತ್ವವನ್ನು ಪ್ರಶ್ನಿಸುತ್ತಿದ್ದವು. ಆ ರೀತಿಯ ಕಂಪನಿಗಳಲ್ಲಿ ಚಾಮುಂಡೇಶ್ವರಿ ಕಂಪನಿ, ಪೀರ್ ಸಾಹೇಬರ ಕಂಪನಿ, ಗೋಕಾಕ ಕಂಪನಿ, ವೆಂಕೋಬರಾವ್ ಕಂಪನಿ, ವಾಮನರಾವ ಮಾಸ್ತರರ ಕಂಪನಿ, ಜಮಖಂಡಿ ಕಂಪನಿ, ಶಿರಹಟ್ಟಿ ಕಂಪನಿ ಮುಂತಾದವು ಗಮನಾರ್ಹವಾದವುಗಳು.

ಇನ್ನು ವಾಸುದೇವರಾವ್ ಸುತ್ತ ಬರೋಣ. ಈತ ಹದಿನೈದು ವರ್ಷಕ್ಕೂ ಹೆಚ್ಚು ಕಾಲ ಬಾಲನಟನಾಗಿಯೇ ದುಡಿದಿದ್ದಾನೆ. ಈಗ ಸ್ವಲ್ಪ ದೊಡ್ಡ ಪಾತ್ರಗಳನ್ನು ಮಾಡಬೇಕೆಂಬ ಆತುರದಲ್ಲಿದ್ದಾನೆ. ಇನ್ನು ಈತನ ಗೆಳೆಯರು ಹಾಗೂ ಹಿರಿಯರು ಯಾಕೋ ಎಲ್ಲಿ ಸಂಬಳ ಹೆಚ್ಚು ಕೊಡುವರೋ ಅತ್ತ ಕಡೆ ಜಿಗಿಯತೊಡಗಿದರು. ಆದರೆ ವಾಸುದೇವರಾವ್‌ಗೆ ಈ ಕಂಪನಿಯೇ ಸರ್ವಸ್ವವಾಯಿತು. ಬೇರೆಲ್ಲೂ ಹೋಗದ ಭಾವನಾತ್ಮಕತೆ ಭದ್ರವಾಗಿತ್ತು. ವೀರಣ್ಣನವರು ಈತನಿಗಿದ್ದ ತನ್ಮಯತೆ, ಮುಗ್ಧತೆ, ಗಂಭೀರತೆ ಮೊದಲಾದ ಸ್ವಭಾವಗಳಿಗೆ ಮಾರುಹೋಗಿದ್ದರು. ಈತ ಮುಂದೊಂದು ದಿನ ಹೆಸರು ಮಾಡುತ್ತಾನೆಂದು ಭಾವಿಸಿದ್ದರು.

ಮುಖ್ಯ ಪಾತ್ರ ಮಾಡುವ ಕಲಾವಿದರು ದಿಢೀರನೆ ಕೈಕೊಟ್ಟರೆ ಉಪಯೋಗವಾಗಲೆಂದು ವೀರಣ್ಣನವರು ಬೇರೊಬ್ಬರನ್ನು ಸಿದ್ಧಗೊಳಿಸಿ ಇಟ್ಟುಕೊಂಡಿರುತಿದ್ದರು. ಯಾವ ಕಾರಣಕ್ಕೂ ಪ್ರದರ್ಶನಕ್ಕೆ ಅಡಚಣೆಯಾಗದಂತೆ ಎಚ್ಚರ ವಹಿಸುತ್ತಿದ್ದರು.

ಒಮ್ಮೆ ಇಂಥದೇ ಸಂದರ್ಭ ಒದಗಿ ಬಂತು. ಅಭಿಮನ್ಯು ಪಾತ್ರ ಮಾಡುತ್ತಿದ್ದ ಗುರುಮೂರ್ತಪ್ಪನವರ ಮಗ ಕಿಟ್ಟಪ್ಪ ಕಂಪನಿ ಬಿಟ್ಟರು. ಆಗ ವೀರಣ್ಣನವರು ವಿಚಲಿತರಾಗದೆ ಆ ಪಾತ್ರಕ್ಕೆ ವಾಸುದೇವರಾವ್‌ರನ್ನು ಗೊತ್ತು ಮಾಡಿದರು. ವಿಶ್ವಾಸ ತುಂಬಿದರು. ಅದರಂತೆ ಇವರು ಅಭಿಮನ್ಯುವಾದರು.

ಕತ್ತಿವರಸೆಯ ದೃಶ್ಯದಲ್ಲಿ ವಾಸುದೇವರಾವ್ ದೀಪ ಆರಿದ ತಕ್ಷಣ ಮೈಯೆಲ್ಲ ರಕ್ತಮಯವಾಗಿ ಕಾಣುವಂತೆ ಬಣ್ಣ ಬಳಿದುಕೊಳ್ಳುತ್ತಿದ್ದರು. ಪ್ರೇಕ್ಷಕರೆಲ್ಲ ದಿಙ್ಮೂಢರಾಗುವಂತೆ ಸಹಜವಾಗಿ ಅಭಿನಯಿಸುತ್ತಿದ್ದರು. ಹಿಂದೆಂದೂ ಕಾಣದ ಜೀವಂತ ಅಭಿಮನ್ಯುವನ್ನು ರಂಗದ ಮೇಲೆ ತನ್ನ ಮೂಲಕ ಕಾಣಿಸಿದರು. ಇವರ ಈ ಪಾತ್ರದ ನೈಜತೆಗೆ ಕಂಪನಿ ಬೆರಗುಗೊಂಡಿತು. ವೀರಣ್ಣನವರ ಅಪ್ಪಣೆ ಮೇರೆಗೆ ಬಹಳ ಕಾಲ ಆ ಪಾತ್ರವೇ ಇವರಿಗೆ ಖಾಯಂ ಆಯ್ತು.

ಆಗ ಸುಮಾರು ೧೯೩೫ ಇರಬೇಕು. ಗುಬ್ಬಿ ಕಂಪನಿ ತನ್ನ ಚಿನ್ನದ ಹಬ್ಬಕ್ಕಾಗಿ 'ಕುರುಕ್ಷೇತ್ರ' ನಾಟಕವನ್ನು ಸಿದ್ಧಗೊಳಿಸಿತು. ಥಿಯೇಟರ್ ನಿರ್ಮಾಣ, ಭಾರೀ ಪ್ರಚಾರ ಮುಂತಾದವುಗಳಿಂದ ನಾಡಿನಾದ್ಯಂತ ಅಲೆಯೆಬ್ಬಿಸಿದ ಈ ನಾಟಕ ಪ್ರಚಂಡ ಯಶಸ್ಸು ಗಳಿಸಿತು. ಮೈಸೂರು ಮಹಾರಾಜರು ಈ ಕಂಪನಿಗೆ ಉಡುಗೊರೆಯಾಗಿ ಒಂದು ಆನೆಯನ್ನು ಕೊಟ್ಟರು. ದಿನೇ ದಿನೇ ಕಂಪನಿ ಗಾತ್ರ ಹೆಚ್ಚಾಯಿತು. ಸಾಮಾನು ಸರಂಜಾಮುಗಳು ಹೆಚ್ಚಾದವು.

ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಕಂಪನಿಯನ್ನು ಸಾಗಿಸಲು ಕಷ್ಟವಾಯಿತು. ಅದಕ್ಕಾಗಿ ಲಾರಿ, ಬಸ್ಸು ಅಷ್ಟೇ ಏಕೆ, ಒಂದು ರೈಲನ್ನೇ ಗೊತ್ತು ಮಾಡುವ ಹಂತ ಬಂದಿತು. ಚಿಕ್ಕ ಥಿಯೇಟರ್ ಇದ್ದದ್ದು ಆಧುನಿಕಗೊಂಡು ಸ್ವಯಂಚಾಲಿತ ಥಿಯೇಟರ್ ಮಾದರಿ ಆರಂಭವಾಯಿತು.

ಹೀಗೆ ಉತ್ತುಂಗಕ್ಕೇರಿದ ಕಂಪನಿಯಲ್ಲಿ ವಾಸುದೇವರಾವ್ ಅವರೂ ಪಕ್ವಗೊಂಡರು. ಎಲ್ಲ ಕಡೆಯೂ ಇವರ ಪಾತ್ರ ಪ್ರಶಂಸೆಗೊಳಗಾಯಿತು. ಅದೇ ಕಂಪನಿಯಲ್ಲಿದ್ದ ಸ್ವಾಮಿಲಾಲ್ ಎಂಬ ಚಿತ್ರಕಾರರು ಇವರ ನಟನೆಯ ಮೇಲೆ ಪರಿಣಾಮ ಬೀರಿದರು. ಅವರು ಬಿಡಿಸುತ್ತಿದ್ದ ಸುಂದರ ಸೀನರಿಗಳ ವೈಭವ ಇವರನ್ನು ಆಕರ್ಷಿಸಿತ್ತು.

'ಕುರುಕ್ಷೇತ್ರ' ನಾಟಕದ ಜನಪ್ರಿಯತೆಯನ್ನು ಕುರಿತ ಚಾಮರಾಜ ಒಡೆಯರು ಅದನ್ನು ಅರಮನೆಯಲ್ಲಿ ಪ್ರದರ್ಶಿಸಲು ಆಹ್ವಾನಿಸಿದರು. ಜಗನ್ಮೋಹನ ಪ್ಯಾಲೇಸ್‌ನಲ್ಲಿ ಸಿದ್ಧತೆಗಳಾದವು. ಅರಮನೆಯಲ್ಲಿದ್ದ ಶಿಸ್ತಿನ ಬಗ್ಗೆ ಒಂಚೂರು ತಿಳಿಯೋಣವೇ. ಯಾವುದೇ ನಾಟಕವನ್ನು ಅಭಿನಯಿಸುವ ಮುನ್ನ ಅದರ ಹಸ್ತಪ್ರತಿಯನ್ನು ಅರಮನೆಯ ದರ್ಬಾರ್ ಭಕ್ಷಿಗಳು ಒಮ್ಮೆ ಪರಿಶೀಲಿಸುತ್ತಿದ್ದರು. ಎಲ್ಲಿಯಾದರೂ ರಾಜರ ಬಗ್ಗೆ ವಿರುದ್ಧವಾದ ದನಿಗಳಿದ್ದರೆ ಅಂಥವುಗಳನ್ನು ನಿಷೇಧಿಸುತ್ತಿದ್ದರು. ಹೀಗೆ ಪರಿಶೀಲನೆಯಾದ ನಂತರ ಆ

ನಾಟಕವನ್ನು ಪ್ರದರ್ಶಿಸಬಹುದಾಗಿತ್ತು. ವೀರಣ್ಣನವರೂ ಸಹ ಇಂಥ ನೀತಿಯನ್ನೇ ಅನುಸರಿಸುತ್ತಿದ್ದರು.

ಅರಮನೆಯ ಪರಿವಾರದವರಿಗಷ್ಟೇ ಮೀಸಲಾಗಿದ್ದ ಈ ಪ್ರದರ್ಶನಗಳಲ್ಲಿ ಮಹಾರಾಣಿಯರು, ಸಂಬಂಧಿಕರು, ಮತ್ತು ಆಗಾಗ ಬ್ರಿಟಿಶ್ ಅಧಿಕಾರಿಗಳೂ ಪಾಲ್ಗೊಳ್ಳುತ್ತಿದ್ದರು. ನಟರು ಯಾವ ಕಾರಣಕ್ಕೂ ಉದ್ದೇಶಪೂರ್ವಕವಾಗಿ ರಾಜರಾಣಿಯರನ್ನು ನೋಡುವಂತಿರಲಿಲ್ಲ. ಅಂಥ ನೋಟ ಅಪರಾಧವಾಗುತ್ತಿತ್ತು.

ಕುರುಕ್ಷೇತ್ರದ ಈ ಪ್ರದರ್ಶನದಲ್ಲಿ ವೀರಣ್ಣನವರ ಹಾಸ್ಯವನ್ನೇ ಹಸಿದವರಂತೆ ಕಾಯುತ್ತಿದ್ದ ಅರಮನೆಯವರು ಖುಶಿಪಟ್ಟರು. ಅದರೊಳಗೆ ಮಿಂಚಿನ ತುಂಡಿನಂತೆ ತೀವ್ರವಾಗಿ ನಟಿಸಿದ ಅಭಿಮನ್ಯುವಿನ ಪಾತ್ರಧಾರಿ ವಾಸುದೇವರಾವ್ ಕೂಡ ಮೆಚ್ಚಿಗೆ ಗಳಿಸಿದರು.

ಹೀಗೆ ವಿಸ್ತಾರಗೊಂಡ ಕಂಪನಿಯಲ್ಲಿ ಹಲವಾರು ನಾಟಕಗಳು ನಡೆಯತೊಡಗಿದವು. ಅವುಗಳಲ್ಲಿ ವಾಸುದೇವರಾವ್ ಪ್ರಮುಖ ಪಾತ್ರಗಳಲ್ಲಿ ಕಾಣಿಸಿಕೊಳ್ಳತೊಡಗಿದರು. ಸದಾರಮೆ, ಪ್ರಭಾಮಣಿ ವಿಜಯ, ಪ್ರಹ್ಲಾದ ಚರಿತ್ರೆ, ಧ್ರುವ ಚರಿತ್ರೆ, ವೀರ ಸಿಂಹ, ರಾಜಭಕ್ತಿ, ರಾಮಾಯಣ, ಕಂಸವಧೆ, ಯಮಗರ್ವಭಂಗ, ಶಾಕುಂತಲ, ಸುರಾಮಹಿಮೆ, ಭಕ್ತ ಕಬೀರ, ಕರ್ನಾಟಕ ಸಾಮ್ರಾಜ್ಯ ಮುಂತಾದ ಪೌರಾಣಿಕ, ಐತಿಹಾಸಿಕ, ಸಾಮಾಜಿಕ ನಾಟಕಗಳು ಭರದಿಂದ ಸಾಗತೊಡಗಿದವು. ಅವುಗಳಲ್ಲೆಲ್ಲ ವಾಸುದೇವರಾವ್ ಅಭಿನಯಿಸಿದರು.

'ಕುರುಕ್ಷೇತ್ರ' ನಾಟಕದ ನಂತರ ಕಂಪನಿಯ ಕಲೆಕ್ಷನ್ ಕ್ಷೀಣಿಸಿತು. ಕೆಲಸಗಾರರಿಗೆ ಕಲಾವಿದರಿಗೆ ಸಂಬಳ ನೀಡುವುದು ಕಷ್ಟವಾಯಿತು. ಈ ಕಾರಣದಿಂದ ತಾತ್ಕಾಲಿಕವಾಗಿ ಕಂಪನಿಗೆ ರಜೆ ಘೋಷಿಸಲಾಯಿತು. ಮತ್ತೆ ಆಹ್ವಾನಿಸುವುದಾಗಿ ತಿಳಿಸಲಾಯಿತು.

## ಹೈದರಾಬಾದ್‌ಗೆ ಪ್ರಯಾಣ...

ಗುಬ್ಬಿ ಕಂಪನಿ ಸ್ಥಗಿತಗೊಂಡೊಡನೆ ವಾಸುದೇವರಾವ್‌ಗೆ ಆತಂಕವಾಯಿತು. ಕಲೆಯಲ್ಲದೆ ಬೇರೆ ವೃತ್ತಿ ಗೊತ್ತಿರದ ಇವರು ಊರಿಗೆ ಹೋಗಿ ಗಂಭೀರವಾದರು. ತಾಯಿ ಕಾಯಿಲೆಯಿಂದ ನರಳಿ ನರಳಿ ಕಣ್ಮುಚ್ಚಿದರು. ತಂದೆಗೂ ಆರೋಗ್ಯ

ಹದಗೆಟ್ಟಿತ್ತು. ಮನೆಯ ಜವಾಬ್ದಾರಿಯೆಲ್ಲ ಮಕ್ಕಳೇ ನಿರ್ವಹಿಸಬೇಕಾದ ಪರಿಸ್ಥಿತಿ ಬಂತು. ಎಲ್ಲ ಹುಡುಗರೂ ಏನಾದರೂ ಕೆಲಸ ಮಾಡಲು ತೀರ್ಮಾನಿಸಿದರು.

ಹೀಗಿರುವಾಗ ಶಂಕರಬಾಬು ಎನ್ನುವವರು ಬಂದರು. ಅವರು ಒಂದು ನಾಟಕದ ತಂಡಕ್ಕಾಗಿ ಹುಡುಕಾಡಿದರು. ಮನೆಯ ಕಡೆ ಇದ್ದ ಕಲಾವಿದರನ್ನೆಲ್ಲ ಒಟ್ಟುಗೂಡಿಸಿದರು. ಅದರಲ್ಲಿ ವಾಸುದೇವರಾವ್ ಮತ್ತು ಅವರ ಅಣ್ಣ ಅವರೂ ಇದ್ದರು. ಅಂತೂ ಶಂಕರಬಾಬು ಇವರೆಲ್ಲರನ್ನು ಕರೆದುಕೊಂಡು ಹೈದರಾಬಾದ್‌ನಲ್ಲಿ ಇಳಿದರು.

ಅಲ್ಲಿನ ಸರ್ಕಾರದ ವತಿಯಿಂದ ಎಲ್ಲ ಕಡೆಯೂ ನಾಟಕ ಪ್ರದರ್ಶಿಸುವ ಯೋಜನೆ ಇದ್ದುದರಿಂದ ಶಂಕರಬಾಬು ಈ ತಂಡದಿಂದ ಅದನ್ನು ಕೈಗೊಂಡರು. 'ಶ್ರೀಕೃಷ್ಣ ಪಾರಿಜಾತ' ವನ್ನು ಆರಂಭಿಸಿದರು. ಸರ್ಕಾರವೇ ಊಟ, ತಿಂಡಿ, ಉಳಿದುಕೊಳ್ಳಲು ವಸತಿ ಹಾಗೂ ಸಂಬಳವನ್ನೂ ನೋಡಿಕೊಳ್ಳುತ್ತಿತ್ತು. ಹೈದರಾಬಾದಿನಾದ್ಯಂತ ನಾಟಕ ಪ್ರದರ್ಶನಗೊಳ್ಳತೊಡಗಿತು. ಪ್ರಶಂಸೆಗೊಳಗಾಯಿತು.

ಈ ಪಾರಿಜಾತ ನಾಟಕದಲ್ಲಿ ವಾಸುದೇವರಾವ್ ನಾರದನ ಪಾತ್ರ ಮಾಡಿದ್ದರು. ಸುಮಾರು ಹದಿನೈದು ಜನ ಆ ತಂಡದಲ್ಲಿದ್ದರು. ಉದಾಹರಣೆಗೆ ಸದ್ಯಕ್ಕೆ ನೆನಪಾಗುತ್ತಿರುವವರು, ಪುಟ್ಟಬಸಪ್ಪ, ತುಳಸಮ್ಮ, ಕೇಶವಮೂರ್ತಿ, ಶ್ರೀಕಂಠಮೂರ್ತಿ ಮೊದಲಾದವರು.

ಒಂದು ವರ್ಷದ ಕಾಲ ಅಲ್ಲೇ ಇದ್ದರು. ಕೊನೆಗೆ ಈ ಸರ್ಕಾರಿ ಕಾರ್ಯಕ್ರಮ ಮುಕ್ತಾಯಗೊಂಡಿತು. ಎಲ್ಲರೂ ಚೆಲ್ಲಾಪಿಲ್ಲಿಯಾಗಬೇಕಾಯಿತು.

ವಾಸುದೇವರಾವ್‌ರ ಅಣ್ಣ ರಾಜಗೋಪಾಲ್‌ರಾವ್ ಸ್ವಲ್ಪ ಚುರುಕಾಗಿದ್ದರು. ಈ ನಾಟಕದ ಸಹವಾಸ ಬೇಡವೆಂದು ಅಲ್ಲೇ ಸಿನಿಮಾ ಹಂಚಿಕೆ ವಲಯದಲ್ಲಿ ಸಣ್ಣ ಕೆಲಸ ಹಿಡಿದು ನೆಲೆಯೂರಿದರು. ಆದರೆ ವಾಸುದೇವರಾವ್‌ಗೆ ರಂಗಭೂಮಿಯ ವಾಸನೆ ನಿಲ್ಲಲಿಲ್ಲ. ಮತ್ತೆ ಬೆಂಗಳೂರಿಗೆ ಬಂದರು.

## ಕೆ. ಹಿರಣ್ಣಯ್ಯನವರ ಕಂಪನಿಗೆ ಪ್ರವೇಶ

ಹೈದರಾಬಾದ್‌ನಿಂದ ಬೆಂಗಳೂರಿಗೆ ಬಂದಾಗ ಇವರಿಗೆ ದಾರಿದೀಪವಾದವರು ವೀರಣ್ಣನವರ ಹೆಂಡತಿ ಜಯಮ್ಮನವರು. ಅವರ ಮಾರ್ಗದರ್ಶನದ ಪರಿಣಾಮವಾಗಿ ಹಿರಣ್ಣಯ್ಯನವರ ಕಂಪನಿಗೆ ಸೇರಿಕೊಂಡರು.

ಅಲ್ಲಿ ಸಹ ಕಲಾವಿದನಂಥ ಸಣ್ಣಪುಟ್ಟ ಪಾತ್ರಗಳು ಸಿಕ್ಕಿದವು, ನಿರಾಶರಾಗದೆ ಅವುಗಳಲ್ಲೇ ಭಕ್ತಿ, ಶ್ರದ್ಧೆಯಿಟ್ಟು ಅಭಿನಯಿಸಿದರು. ಅಲ್ಲಿ ಇವರು ಪಾತ್ರ ಮಾಡಿದ ನಾಟಕಗಳೆಂದರೆ ಆಗ ಖ್ಯಾತಿ ಪಡೆದಿದ್ದಂಥ ದೇವದಾಸಿ, ಮದ್ಮಲ್ ಟೋಪಿ ಮುಂತಾದವು, ಈ ಕಂಪನಿಯಲ್ಲಿ ಸುಮಾರು ಎಂಟು ಹತ್ತು ತಿಂಗಳು ದುಡಿದರು. ಮತ್ತೆ ಕೆಲಸವಿಲ್ಲದಾಯ್ತು.

## ಮರಳಿ ಗೂಡಿಗೆ

ಬೇಸರವಾಯ್ತು. ಎಲ್ಲೂ ಬದುಕಲು ನೆಲೆಯಿಲ್ಲ. ಓದಿಯೂ ಇಲ್ಲ. ಏನು ಮಾಡುವುದೆಂದು ತೋಚದೆ ಕಂಗಾಲಾದ ವಾಸುದೇವರಾವ್ ಸಿಕಂದರಾಬಾದ್‌ನಲ್ಲಿದ್ದ ತನ್ನ ಅಣ್ಣನ ಮನೆಗೆ ಪ್ರಯಾಣ ಬೆಳೆಸಿದರು. ಮನಸ್ಸಿನಲ್ಲಿ ದುಗುಡ, ಅಭದ್ರತೆಯ ಹತಾಶೆ, ಈ ಪ್ರಪಂಚದಲ್ಲಿ ಬದುಕಲು ನನಗೊಂದಿಷ್ಟು ಜಾಗ ದೊರಕದೇ ಎಂಬ ಕಾತರ. ಎಲ್ಲಿಯಾದರೂ ತೂರಿಕೊಳ್ಳಲು ಬಿಡದ ಮುಗ್ಧತೆ, ಮೆದುಮನಸ್ಸು,

ಸಿಕಂದರಾಬಾದ್‌ನ ಅಣ್ಣನಿಗೆ ಮದುವೆಯಾಗಿತ್ತು. ಅವರ ಜೀವನ ಹೇಗೋ ಸುಧಾರಿಸಿತ್ತು. ಅಲ್ಲಿಗೆ ಹೋದ ವಾಸುದೇವರಾವ್ ಕೆಲ ಕಾಲ ಉಳಿದರು. ಮನೆಯಲ್ಲಿರಲು ಬೇಜಾರು. ಕೈಗೆ ಸಿಕ್ಕಿದ ಪುಸ್ತಕಗಳನ್ನು ಓದಲು ಪ್ರಯತ್ನಿಸಿದರು. ಕಂಪನಿಯ ಗುರುಗಳು ಕಲಿಸಿದ ಪಾಠ, ತನ್ನ ತಂದೆ ಕಲಿಸಿದ ಪಾಠ ಇವುಗಳ ಪರಿಣಾಮವಾಗಿ ಓದಲು ಕಷ್ಟವಾಗಲಿಲ್ಲ. ಕತೆ, ಜೀವನಚರಿತ್ರೆಗಳನ್ನು ಓದಲಾರಂಭಿಸಿದರು. ಜೀವನಚರಿತ್ರೆಗಳು ಇವರ ಮೇಲೆ ಗಾಢವಾದ ಪರಿಣಾಮವನ್ನುಂಟು ಮಾಡಿದವು. ಒಬ್ಬೊಬ್ಬರ ಜೀವನದ ಏಳು ಬೀಳುಗಳು ಇವರ ಮನಸ್ಸಿಗೆ ನಾಟಿದವು.

ಎರಡು ಮೂರು ತಿಂಗಳು ಕಳೆಯಿತು. ಗುಬ್ಬಿ ಕಂಪನಿಯಿಂದ ಒಂದು ಪತ್ರ ಬಂತು :

ಪ್ರಿಯ ವಾಸುದೇವರಾವ್,

ನಿಮಗೆ ತಿಳಿಸುವುದೇನೆಂದರೆ, ನಮ್ಮ ಕಂಪನಿ ಮತ್ತೆ ಆರಂಭಗೊಂಡಿದೆ. ನೀವು ಈ ಕೂಡಲೇ ಬಂದು ಹಾಜರಾಗಬೇಕೆಂದು ವಿನಂತಿ

ವಾಸುದೇವರಾವ್‌ಗೆ ಎಲ್ಲಿಲ್ಲದ ಸಂತೋಷವಾಯ್ತು. ಕುಣಿದಾಡಬೇಕೆನಿಸಿತು. ಆದರೆ ಅಣ್ಣನಿಗೆ ಈ ವಿಷಯ ತಿಳಿಸಿದರೆ ಆತ ನಿರಾಕರಿಸುತ್ತಾನೆ.

ನಾಟಕದ ಸಹವಾಸ ಸಾಕು ಬೇರೆ ಕೆಲಸ ಮಾಡೆಂದು ಸದಾ ಪೀಡಿಸುತ್ತಿದ್ದಾನೆ. ಈ ಪತ್ರ ತೋರಿದರೆ ಖಂಡಿತ ಅವನು ಕಳಿಸಲಾರ ಎಂದು ಯೋಚಿಸಿದರು.

ತಕ್ಷಣ ಗುಬ್ಬಿ ಕಂಪನಿಗೆ ಪತ್ರ ಬರೆದರು :

ಪೂಜ್ಯ ಅನ್ನದಾತರೇ,
ನಿಮ್ಮ ಪತ್ರ ಕೈಸೇರಿತು. ಆನಂದ ಬಾಷ್ಪಗಳುದುರಿದವು. ನನಗೆ ಬರಲು ಬಸ್ ಚಾರ್ಜ್ ಇಲ್ಲ. ತಾವು ದಯಮಾಡಿ ಸ್ವಲ್ಪ ಹಣ ಕಳಿಸಿದರೆ ನಿಮಗೆ ಪುಣ್ಯ ಬಂದೀತು. ತಕ್ಷಣ ಬಂದು ಸೇರುತ್ತೇನೆ. ಅಂಚೆಯನ್ನೇ ನಿರೀಕ್ಷಿಸುತ್ತಿರುವ ನಿಮ್ಮ ಸೇವಕ

- ವಾಸುದೇವರಾವ್

ಕೆಲ ದಿನಗಳ ನಂತರ ಗುಬ್ಬಿ ಕಂಪನಿಯಿಂದ ಬಸ್ ಚಾರ್ಜ್‌ಗೆ ಹಣ ಬಂತು. ವಾಸುದೇವರಾವ್‌ಗೆ ಅತೀವ ಸಂಭ್ರಮವಾಯಿತು. ಅಣ್ಣ ಅತ್ತಿಗೆ ಯಾರಿಗೂ ವಿಚಾರ ತಿಳಿಸಲಿಲ್ಲ. ಒಂದೆರಡು ದಿನವಾಯ್ತು. ಮನಸ್ಸು ತಡೆಯಲಿಲ್ಲ. ಅಣ್ಣನಿಗೆ ಹೇಳಿಯೇ ಬಿಟ್ಟರು; ನನಗೆ ಇಲ್ಲಿ ತುಂಬಾ ಬೇಜಾರಾಗುತ್ತಿದೆ. ಮತ್ತೆ ಕಂಪನಿಗೆ ಹೋಗಲು ನಿರ್ಧರಿಸಿದ್ದೇನೆ. ಈ ತೀರ್ಮಾನದಿಂದ ನಿಮ್ಮ ಮನಸ್ಸಿಗೆ ನೋವಾಗಿದ್ದರೆ ಕ್ಷಮಿಸಿ.

ಬೆಂಗಳೂರಿಗೆ ಪ್ರಯಾಣ ಬೆಳೆಸಿದರು. ಉತ್ಸಾಹದಿಂದ ಕರು ಹಸುವಿನ ಬಳಿ ಓಡುವ ಆತುರದಂತೆ ಮರಳಿ ಗುಬ್ಬಿ ಕಂಪನಿ ಕೂಡಿಕೊಂಡರು.

ವೀರಣ್ಣನವರ ಅಳಿಯ ಚೆನ್ನಪ್ಪನವರು ಕಂಪನಿಯ ಮೇಲ್ವಿಚಾರಣೆ ನೋಡಿಕೊಳ್ಳುತ್ತಿದ್ದರು. ಸೀನರಿ, ಥಿಯೇಟರ್ ಎಲ್ಲವುಗಳನ್ನು ಹೊಸತನದಿಂದ ರೂಪಿಸಿದ್ದರು. 'ಗೋಪಿಚಂದ್' ಎಂಬ ನೂತನ ನಾಟಕವನ್ನು ಶುರುಮಾಡಿದರು. ಅದರಲ್ಲಿ ಬರುವ ಜಲಂಧರ್ ಪಾತ್ರವನ್ನು ವಾಸುದೇವರಾವ್ ಮಾಡಿದರು. ಅಷ್ಟೇ ಅಲ್ಲದೆ ಸ್ವಲ್ಪ ದಿನಗಳ ನಂತರ ಖಾನೀಫ್‌ನಾಥ್ ಎಂಬ ಮುಖ್ಯ ಪಾತ್ರವನ್ನೂ ಮಾಡಿದರು. ಇದಾದ ನಂತರ ಆರಂಭಗೊಂಡದ್ದು 'ನವೀನ ಕೃಷ್ಣಲೀಲೆ' ನಾಟಕ.

ನವೀನ ಕೃಷ್ಣಲೀಲೆ' ನಾಟಕ ಅನೇಕ ಆಧುನಿಕ ಅಂಶಗಳನ್ನೊಳಗೊಂಡಿತ್ತು. ಸೀನರಿಗಳಲ್ಲಿ, ಪರಿಕರಗಳಲ್ಲಿ ಸಂಗೀತದಲ್ಲಿ ಹಾಗೂ ವಿಚಿತ್ರವಾದ ತಾಂತ್ರಿಕ ಜೋಡಣೆಗಳಲ್ಲಿ ಉನ್ನತ ಮಟ್ಟ ಹೊಂದಿದ್ದ ಈ ನಾಟಕ ಎಲ್ಲರನ್ನೂ ಆಕರ್ಷಿಸಿತು. ಆಗ ತಾನೇ ಚಲನಚಿತ್ರಗಳ ಮಾಂತ್ರಿಕತೆ ಆರಂಭಗೊಂಡಿತ್ತು. ವೀರಣ್ಣನವರೂ ಚಲನಚಿತ್ರ ರಂಗಕ್ಕೆ ಪ್ರವೇಶ ಮಾಡಿದ್ದರು.

ಜನರಿಗೆ ಚಲನಚಿತ್ರಗಳ ಬಗ್ಗೆ ವಿಚಿತ್ರ ಕುತೂಹಲವಿತ್ತು. ಪರದೆಯ ಹಿಂದೆ ಎಲ್ಲಾ ನಡೆಯುತ್ತದೆ ಎಂಬ ಭ್ರಾಂತಿ ಇತ್ತು. ಸಾಲುಸಾಲಾಗಿ ಅವುಗಳ ವೀಕ್ಷಣೆಗೆ ನುಗ್ಗತೊಡಗಿದರು. ನಾಟಕಕ್ಕಿಂತ ಚಲನಚಿತ್ರವೇ ಮನರಂಜನೆ ನೀಡುವ ಅದ್ಭುತ ಮಾಧ್ಯಮವೆಂದು ಆಗಿನವರು ಭಾವಿಸಿದ್ದರು.

ಮೂಕಚಿತ್ರಗಳು ಕನ್ನಡಕ್ಕೆ ಕಾಲಿಟ್ಟವು. ಹರಿಮಾಯೆ, ಲವ್ವ್ಯಾಫೇರ್ ಮೊದಲಾದ ಚಿತ್ರಗಳು ಕನ್ನಡದಲ್ಲಿ ಶುರುವಾಗಿದ್ದವು. ಜನರಿಗೆ ಕ್ರಮೇಣ ಮೂಕಚಿತ್ರಗಳು ಆಪ್ತವಾಗದೆ ಮತ್ತೆ ರಂಗಭೂಮಿಗೇ ಬರತೊಡಗಿದರು.

ಹೀಗಿರುವಾಗ 'ಆಲಂ ಆರಾ', ಎಂಬ ಟಾಕಿ ಚಿತ್ರ ಕಣ್ಣಿಟ್ಟಿತು. ಈ ಚಿತ್ರ ಬಂದೊಡನೆ ಜನ ವಿಸ್ಮಯದಿಂದ ಅದನ್ನು ನೋಡಿದರು. ಬೆರಗಾದರು. ಎಂಥ ಕಾಲ ಬಂತೆಂದು ಕುಣಿದಾಡಿದರು. ಈ ಚಿತ್ರ ನಾಟಕಗಳಿಗೆ ಬಲವಾದ ಪೆಟ್ಟು ಕೊಟ್ಟಿದ್ದಂತೂ ನಿಜ. ಎಷ್ಟೋ ಕಂಪನಿಗಳು ನಿಂತವು.

ಅನೇಕ ರಂಗಭೂಮಿ ಕಲಾವಿದರು ಅದರ ಮಾಯೆಗೆ ಮರುಳಾಗಿ ಚಿತ್ರರಂಗ ಸೇರಿದರು. ಇಂಥ ಸಂದರ್ಭದಲ್ಲಿ ಶುರುವಾದ 'ನವೀನ ಕೃಷ್ಣಲೀಲೆ' ಸಿನಿಮಾಕ್ಕೆ ಸ್ಪರ್ಧೆ ನೀಡುವ ಅನೇಕ ತಂತ್ರಗಳನ್ನು ಒಳಗೊಂಡಿತ್ತು.

ಈ ರೀತಿಯ ಆಧುನಿಕ ಲಕ್ಷಣ ಹೊಂದಿದ 'ನವೀನ ಕೃಷ್ಣಲೀಲೆ'ಯಲ್ಲಿ ವಾಸುದೇವರಾವ್ ಕೃಷ್ಣನ ಪಾತ್ರ ಮಾಡಿದರು. ಈ ಪಾತ್ರವನ್ನು ಅವರು ಮಾಡುತ್ತಿದ್ದ ರೀತಿಗೆ ಜನ ದಂಗಾಗಿದ್ದರು. ನೂತನ ಕೃಷ್ಣನನ್ನು ನೋಡಲು ಹಾಗೂ ಅಲ್ಲಿನ ಆಧುನಿಕ ತಂತ್ರಗಳನ್ನು ಸವಿಯಲು ಜನ ಕಿಕ್ಕಿರಿಯತೊಡಗಿದರು.

ಅದು ಬೇರೆ ಮಹಾಯುದ್ಧದ ಕಾಲ. ಭಾರತದಲ್ಲೂ ಯುದ್ದದ ಭೀತಿ ತುಂಬಿದ್ದ ಕಾಲ. ಈ ಯುದ್ಧದ ಛಾಯೆ ಕಂಪನಿಯೊಳಗೂ ಹೊಕ್ಕಿತ್ತು. ಬ್ರಿಟಿಶರು ನಮ್ಮನ್ನು ಆಳುತ್ತಿದ್ದುದರಿಂದ ಯಾವಾಗ ಏನು ಸಂಭವಿಸುವುದೋ ಎಂಬ ಆತಂಕ ಎಲ್ಲರಿಗಿತ್ತು. ಹಿಟ್ಲರನ ಬಗ್ಗೆ ಎಲ್ಲ ಕಡೆ ಮಾತನಾಡುತ್ತಿದ್ದರು. ಅವನ ಬಗ್ಗೆ ಕಂಪನಿಯವರೂ ಚರ್ಚಿಸುತ್ತಿದ್ದರು. ಬೆಂಗಳೂರಿನಲ್ಲಿ ರಾತ್ರಿ ಹೊತ್ತು ವಿದ್ಯುತ್‌ದೀಪಗಳನ್ನು ಆರಿಸಿಬಿಡುತ್ತಿದ್ದರು. ಜರ್ಮನ್‌ನವರು ವಿಮಾನದಲ್ಲಿ ಬಂದು ಬಾಂಬ್ ಎಸೆದಾರೆಂಬ ಭಯದಿಂದ ಹೀಗೆ ಕತ್ತಲೆ ಮಾಡುತ್ತಿದ್ದರು. ಆಗಾಗ ಸೈರನ್ ಕೂಗಿಸಿ ಜನರನ್ನು ಜಾಗೃತಗೊಳಿಸಲಾಗುತ್ತಿತ್ತು. ಆಹಾರದ ಸಮಸ್ಯೆ ಉಂಟಾಯಿತು. ರಂಗೂನ್‌ನಿಂದ ಬರುತ್ತಿದ್ದ ಕಳಪೆ ಅಕ್ಕಿಯನ್ನೇ ಕಾರ್ಡ್ ಮೂಲಕ

ವಿತರಿಸಲಾಗುತ್ತಿತ್ತು. ಕಂಪನಿಗಳಿಗೆ ಜನ ಬರುವುದು ಕಡಿಮೆಯಾಯ್ತು. ಕಲಾವಿದರಿಗೂ ಆಹಾರದ ತೀವ್ರ ಮುಗ್ಗಟ್ಟಾಯ್ತು. ಪೋಲೀಸ್‌ನವರು ಗುಬ್ಬಿ ಕಂಪನಿಗೆ ಅಪಾಯಕರವಾದ ಪ್ರಯೋಗ ಮಾಡದಂತೆ ಎಚ್ಚರಿಕೆ ಕೊಟ್ಟಿದ್ದರು.

ಒಮ್ಮೆ ಮದ್ರಾಸ್‌ನಲ್ಲಿ 'ನವೀನ ಕೃಷ್ಣಲೀಲೆ' ಪ್ರದರ್ಶಿತವಾಗುತ್ತಿತ್ತು. ಖಡ್ಗಗಳಿಗೆ ಗಂಧಕ ಮತ್ತಿತರ ರಾಸಾಯನಿಕ ಸವರಿ, ಯುದ್ಧದ ದೃಶ್ಯಗಳಲ್ಲಿ ಅವು ಭಗ್ ಎಂದು: ಹೊತ್ತಿಕೊಳ್ಳುವಂತೆ ಮಾಡಲಾಗಿತ್ತು. ಅದು ಅಚಾನಕ್ಕಾಗಿ ಸಿಡಿಯಿತು. ಜನರೆಲ್ಲ ಕೂಗಾಡುತ್ತ ಪರಾರಿಯಾಗ ತೊಡಗಿದರು. ತಕ್ಷಣ ಪೋಲೀಸ್‌ನವರು ಕಂಪನಿಯೊಳಗೆ ನುಗ್ಗಿದರು. ವಿಚಾರಿಸಿದರು. ಕೊನೆಗೆ ಬಲ್ಫ್ ಬರ್ನಾಯಿತೆಂದು ಸುಳ್ಳು ಹೇಳಿ ಅವರನ್ನು ವಾಪಸ್ಸು ಕಳಿಸಲಾಯಿತು.

ಕೃಷ್ಣನನ್ನು ಕೂಡಿದ ಜೈಲು ತನ್ನ ಬೀಗ ಒಡೆದುಕೊಂಡು ತೆರೆದುಕೊಳ್ಳುವ ದೃಶ್ಯ ಭಯಂಕರವಾಗಿತ್ತು. ಹೀಗೆ ಆಧುನಿಕತೆಯನ್ನು ಒಳಗೊಂಡ ಕೃಷ್ಣಲೀಲೆ ಅಸಂಖ್ಯ ಪ್ರದರ್ಶನಗಳನ್ನು ಕಂಡಿತು. ಮೈಸೂರಿನಲ್ಲೇ ಇದರ ನೂರು ಪ್ರದರ್ಶನಗಳಾದವು.

ಬೆಳ್ಳಾವೆ ನರಹರಿಶಾಸ್ತ್ರಿಗಳು ಗುಬ್ಬಿ ಕಂಪನಿಗೆ ನಾಟಕ ಬರೆದುಕೊಡುತಿದ್ದರು. ಬಿ. ಪುಟ್ಟಸ್ವಾಮಯ್ಯನವರೂ ಕುರುಕ್ಷೇತ್ರ, ದಶಾವತಾರ, ಅಕ್ಕಮಹಾದೇವಿ ಮೊದಲಾದ ನಾಟಕಗಳನ್ನು ರಚಿಸಿಕೊಟ್ಟಿದ್ದರು.

ಆರಂಭದ ನಾಟಕಗಳಲ್ಲಿ ಹಾಸ್ಯವೇ ಪ್ರತ್ಯೇಕವಾಗಿರುತ್ತಿತ್ತು. ಆದರೆ ನರಹರಿಶಾಸ್ತ್ರಿಗಳು ವಸ್ತುವಿನೊಳಗೇ, ಅಂದರೆ ನಾಟಕದೊಳಗೇ ಹಾಸ್ಯವನ್ನು ತಂದರು.

ಕೆಲವು ಕಾಲ ತೆಲುಗಿನಲ್ಲಿ 'ಕುರುಕ್ಷೇತ್ರ'ವನ್ನು ಆಡಲಾರಂಭಿಸಿದರು. ಸುಮಾರು ಒಂದೂವರೆ ವರ್ಷಗಳ ಕಾಲ ಗುಂಟೂರು, ನೆಲ್ಲೂರು ಮೊದಲಾದ ಹೈದರಾಬಾದ್ ಪ್ರಾಂತ್ಯಗಳಲ್ಲೇ ಈ ನಾಟಕ ಪ್ರದರ್ಶನಗೊಂಡಿತು. ಅಲ್ಲಿನ ಸರ್ಕಾರ ವೀರಣ್ಣನವರಿಗೆ 'ಕರ್ನಾಟಕ ಆಂಧ್ರ ನಾಟಕ ಸಾರ್ವಭೌಮ' ಎಂಬ ಬಿರುದು ನೀಡಿ ಗೌರವಿಸಿತು.

ಎಲ್ಲ ಕಡೆ ಸ್ವಾತಂತ್ರ್ಯ ಚಳುವಳಿಯ ಕಾವು ಹಬ್ಬಿತ್ತು. ಆದರೆ ವಾಸುದೇವ ರಾವ್ ಭಯದಿಂದ ಯಾವುದೇ ಗಲಾಟೆಗೆ ತಲೆಯಿಕ್ಕಲಿಲ್ಲ.

೧೯೪೭ ರಂದು ಸ್ವಾತಂತ್ರ್ಯ ಬಂದ ರಾತ್ರಿ ಗುಬ್ಬಿ ಕಂಪನಿ ತಿಪಟೂರಿನಲ್ಲಿ ಬೀಡುಬಿಟ್ಟಿತ್ತು. ವಾಸುದೇವರಾವ್ ಮತ್ತು ಗೆಳೆಯರು ರಾತ್ರಿ ಹನ್ನೆರಡರ ವರೆಗೂ

ಎಚ್ಚರವಾಗಿದ್ದರು. ಚಿತ್ರದುರ್ಗದ ಕಡೆಯ ವೀರಭದ್ರಪ್ಪ ಎಂಬುವರೂ ಇವರೂ ಕೂಡಿ ಬಾವುಟ ಹಾರಿಸಿ ಕುಣಿದಾಡಿದರು.

'ನವೀನ ಕೃಷ್ಣಲೀಲೆ' ನಾಟಕದ ನಂತರ 'ಲವಕುಶ' ಆರಂಭವಾಯಿತು. ವೀರಣ್ಣನವರ ಮಗ ಚೆನ್ನಬಸವಣ್ಣ ನಡೆಸುತ್ತಿದ್ದ ಈ ಕಾಲದಲ್ಲಿ ಮೂವಿಂಗ್ ಥಿಯೇಟರ್ ಬಂತು. ನಟ ರಾಜಕುಮಾರ್ ಮತ್ತು ಅವರ ತಂದೆ ಆಗಮಿಸಿದ್ದು ಈ ಸಂದರ್ಭದಲ್ಲೇ, "ನವೀನ ಕೃಷ್ಣಲೀಲೆ' ಸಮಯದಲ್ಲಿ ಅವರು ಬಂದರು. ಪುಟ್ಟಸ್ವಾಮಯ್ಯನವರು, ಮುತ್ತುರಾಜ್ (ಇದು ರಾಜಕುಮಾರ್‌ರವರಿಗಿದ್ದ ಮೊದಲಿನ ಹೆಸರು), ವರದರಾಜ್ ಹಾಗೂ ಶಾರದ ಬಂದರು.

ಪುಟ್ಟಸ್ವಾಮಯ್ಯನವರು ಕಂಸನ ಪಾತ್ರ ಮಾಡುತ್ತಿದ್ದರು. ಅದ್ಭುತವಾಗಿ ಅಭಿನಯಿಸುತ್ತಿದ್ದರು. ವಾಸುದೇವರಾವ್ ಮತ್ತು ರಾಜ್‌ಕುಮಾರ್‌ರವರು ಒಟ್ಟಾಗಿ ಪಾತ್ರ ಮಾಡುತ್ತಿದ್ದರು. ಕೃಷ್ಣ ಮತ್ತು ಬಲರಾಮರಾಗಿ ಅಭಿನಯಿಸುತ್ತಿದ್ದರು. ಆಗ ಕಂಪನಿಯಲ್ಲಿ ನಿಜವಾದ ಆನೆಯೇ ಇತ್ತು. ಆನೆ ಪಳಗಿತ್ತು. ರೈಲಿನಲ್ಲಿ, ಲಾರಿಯಲ್ಲಿ ಸಾಗಿಸುತ್ತಿದ್ದರು. ಮೈಸೂರಿನ ಕ್ಯಾಂಪ್‌ನಲ್ಲಿ ರಾಜಕುಮಾರ್ ತಂದೆ ತೀರಿಕೊಂಡರು. ಕೆಲಕಾಲದ ನಂತರ ರಾಜಕುಮಾರ್ ಚಿತ್ರರಂಗ ಸೇರಿದರು.

## ಮದುವೆ

ವಾಸುದೇವರಾವ್ ಕಂಪನಿಯಲ್ಲಿರುವಾಗಲೇ ತಾಯಿ ತೀವ್ರವಾದ ಅನಾರೋಗ್ಯದಿಂದ ತೀರಿಹೋದರು. ಇದರಿಂದ ಇವರ ಕುಟುಂಬಕ್ಕೆ ಆಘಾತವಾಯಿತು. ತಂದೆಗೂ ವಯಸ್ಸಾಗಿತ್ತು. ಅಣ್ಣಂದಿರೆಲ್ಲ ಮದುವೆಯಾಗಿದ್ದರು. ಆದರೆ ವಾಸುದೇವರಾವ್‌ಗೆ ಮದುವೆಯಾಗಲು ಆಸಕ್ತಿಯಿರಲಿಲ್ಲ. ಜೀವನದ ಬಗೆಗಿದ್ದ ಭಯ ಇದಕ್ಕೆ ಕಾರಣವಾಗಿತ್ತು. ಸಂಸಾರ ನಡೆಸಲು ಯಾವುದೇ ಹಣಕಾಸಿನ ಬಲವಿರಲಿಲ್ಲ. ನಾಟಕದಿಂದ ಬರುವ ಸಂಪಾದನೆ ಅತ್ಯಲ್ಪವಾಗಿತ್ತು. ತನ್ನ ಹೊಟ್ಟೆ ಬಟ್ಟೆಗೇ ನೇರೂಪಾಗುತ್ತಿತ್ತು. ಇದರಿಂದ ನೊಂದ ಇವರಿಗೆ ಮದುವೆಯ ಬಗ್ಗೆ ಅಂಥ ವ್ಯಾಮೋಹವಿರಲಿಲ್ಲ.

ವೀರಣ್ಣನವರು ವಿವಾಹವಾಗೆಂದು ಹೇಳುತ್ತಿದ್ದರು. ಆದರೆ ನನಗೆ ಹೆಣ್ಣು ಕೊಡಲು ಯಾರು ತಾನೇ ಮುಂದೆ ಬರುತ್ತಾರೆಂದು ವಾಸುದೇವರಾವ್ ನೊಂದು ಕೊಳ್ಳುತ್ತಿದ್ದರು.

ಹೀಗಿರುವಾಗ ಒಮ್ಮೆ 'ಕುರುಕ್ಷೇತ್ರ' ನಾಟಕ ನಡೆಯುತ್ತಿತ್ತು. ಗುಬ್ಬಿ ರಂಗಮಂದಿರದಲ್ಲಿ ಈ ಪ್ರದರ್ಶನ ನೋಡಲು ಜನ ಕಿಕ್ಕಿರಿದಿದ್ದರು. ಶಂಕರರಾವ್ ತಮ್ಮ ಹೆಂಡತಿ ಹಾಗೂ ತಂಗಿಯರೊಡನೆ ನಾಟಕ ನೋಡಲು ಬಂದಿದ್ದರು. ನಾಟಕ ಮುಗಿಯಿತು. ಆನಂತರ ಯಾರ ಬಳಿಯೋ ವಾಸುದೇವರಾವ್‌ರನ್ನು ಸ್ವಲ್ಪ ಕರೆಯಿರಿ ಎಂದು ಹೇಳಿ ಶಂಕರರಾವ್ ಇವರನ್ನು ಕರೆಸಿಕೊಂಡರು. ವಾಸುದೇವರಾವ್‌ಗೆ. ಆಶ್ಚರ್ಯವಾಯಿತು. ಹೋಗಿ ನೋಡುತ್ತಾರೆ, ಅಪರಿಚಿತರು.

'ನಾಳೆ ಬೆಳಗ್ಗೆ ವಾಣಿವಿಲಾಸ ಆಸ್ಪತ್ರೆಯೆದುರು ಇರೋ ನಮ್ಮ ಮನೆಗೆ ಬನ್ನಿ. ಮರೆಯಬೇಡಿ. ಒಂದು ಮುಖ್ಯವಾದ ವಿಚಾರ ಇದೆ. ಮಾತಾಡಬೇಕು' ಎಂದು ಹೇಳುತ್ತ, ಶಂಕರರಾವ್ ವಿಳಾಸ ಕೊಟ್ಟು ಹೋದರು. ಇವರಿಗೆ ಏನೂ ಅರ್ಥವಾಗಲಿಲ್ಲ.

ಮಾರನೇ ದಿನ ಶಂಕರರಾವ್ ಮನೆಗೆ ವಾಸುದೇವರಾವ್ ಹೋದರು. ಪ್ರೀತಿಯ ಸತ್ಕಾರ. ಎಷ್ಟು ಹೊತ್ತಾದರೂ ವಿಷಯ ಏನು ಎಂಬುದನ್ನು ತಿಳಿಸಲಿಲ್ಲ. ಹುಡುಗಿ ಗೋಡೆಯ ಮರೆಯಲ್ಲಿ ತಲೆ ಬಗ್ಗಿಸಿಕೊಂಡು ನಿಂತಿದೆ. ಶಂಕರರಾವ್ ಬಾಯ್ತೆಗೆದರು :

“ನಿಮ್ಮ ಊರಿನಿಂದ ನಮಗೆ ಪತ್ರ ಬಂದಿದೆ. ನಿಮ್ಮ ತಂದೆ ಬರ್ದಿರೋದು. ಅವರು, ನಾವು ಕಾರ್ಕಳದಲ್ಲಿದ್ದಾಗ ನಮ್ಮ ಮನೆಗೆ ಭೇಟಿ ಕೊಟ್ಟಿದ್ರು. ಇಲ್ಲಿಗೆ ಹತ್ತು ವರ್ಷ ಆಯ್ತು ಬಿಡು. ಆಗ ನಮ್ಮ ಮೀರಾಬಾಯಿ ಚಿಕ್ಕವಳು. ಇನ್ನೂ ಎಸ್.ಎಸ್.ಎಲ್.ಸಿ. ಓದ್ತಿದ್ಲು. ಈಗ ಓದು ಮುಗ್ಸಿ ಇಲ್ಲೇ ಆಸ್ಪತ್ರೆಯಲ್ಲಿ ಉದ್ಯೋಗದಲ್ಲಿದ್ದಾಳೆ ಈಗ ಈಕೆನ ನಿನಗೆ ಮದ್ವೆ ಮಾಡಿಕೊಡೋಕೆ ನಮಗೆ ಕಷ್ಟವಿಲ್ಲ' ಎಂದರು.

ವಾಸುದೇವರಾವ್‌ಗೆ ಸಂಕೋಚ, ನಾಚಿಕೆ ಒಟ್ಟಿಗೇ ಆಗಿದ್ದರ ಜೊತೆಗೆ ಆಶ್ಚರ್ಯವಾಯಿತು. ಒಪ್ಪಿಕೊಳ್ಳಲೂ ಆಗದೆ, ಇಲ್ಲಾ ಎನ್ನಲೂ ಆಗದೆ ಚಡಪಡಿಸುತ್ತ, “ನನಗೆ ಜೀವನ ನಡೆಸೋದು ಕಷ್ಟ..' ಎಂದು ಗೊಣಗಾಡಿದರು.

ಶಂಕರರಾವ್ ಧೈರ್ಯ ತುಂಬಿದರು. ನಿನ್ನ ಕಷ್ಟ ಸುಖಕ್ಕೆ ನಾವಿಲ್ಲವೆ ಎಂದರು. ಯಾವುದನ್ನೂ ತಿಳಿಸುತ್ತೇನೆಂದು ಕಂಪನಿಯತ್ತ ಹೊರಟರು. ಸ್ವಲ್ಪ ದೂರ ಹೋಗಿ, ಶಂಕರರಾವ್ ಮನೆಯತ್ತ ತಿರುಗಿ ನೋಡಿದರು. ಕಿಟಕಿಯಲ್ಲಿ ಮೀರಾಬಾಯಿಯ ಕಣ್ಣು ರೆಪ್ಪೆ ಬಡಿಯದೆ ಅರಳಿದ್ದವು.

ಮೀರಾಬಾಯಿಯವರ ಮತ್ತೊಬ್ಬ ಅಣ್ಣ 'ಕಛ್' ನಲ್ಲಿದ್ದರು. ಡಾಕ್ಟರಾಗಿದ್ದ ಅವರಿಗೆ ಮದುವೆಯಾಗಿರಲಿಲ್ಲ. ತಂಗಿಯ ಮದುವೆಯಾಗದೆ ತಾನು

ಮದುವೆಯಾಗಲು ಸಾಧ್ಯವಿಲ್ಲವಾಗಿತ್ತು. ಈ ಕಾರಣದಿಂದ ಶಂಕರರಾವ್ ಬೇಗ ಗಂಡು ಹುಡುಕುವ ಶೋಧದಲ್ಲಿದ್ದರು. ಆಗ ನೆನಪಿಗೆ ಬಂದದ್ದು ವಾಸುದೇವರಾವ್,

ವಾಸುದೇವರಾವ್ ಕಂಪನಿಯ ಜನರಿಗೆ ವಿಷಯ ಮುಟ್ಟಿಸಿದರು. ಜಯಮ್ಮನವರು ಪ್ರೋತ್ಸಾಹಿಸಿದರು. ಕೊನೆಗೂ ಬಲವಂತವೆನಿಸಿಯೂ ಒಪ್ಪಿಕೊಂಡರು. ಹುಡುಗಿಯ ಫೋಟೋವನ್ನು ತಂದೆಗೆ ಪೋಸ್ಟ್ ಮಾಡಿದರು.

ಅಷ್ಟರಲ್ಲಿ ಕಛ್‌ನಿಂದ ಮೀರಾಬಾಯಿಯ ಅಣ್ಣ ಅಂದ್ರೆ ಡಾಕ್ಟರು ಬಂದ್ರು. ಹುಡುಗನ ಬಗ್ಗೆ ತಿಳಿದುಕೊಂಡರು. ನಾಟಕದಲ್ಲಿರೋನು ಬೇಡವೇ ಬೇಡ ಎಂದು ಕಿಡಿ ಕಾರಿದರು. ಬೇರೆ ಗಂಡು ನೋಡಲು ಆರಂಭಿಸಿದರು. ಮೀರಾಬಾಯಿಯ ಅರಳಿದ ಕಣ್ಣಲ್ಲಿ ನೀರು ಉದುರತೊಡಗಿದವು.
ಎಲ್ಲೆಲ್ಲೋ ಪ್ರಯತ್ನ ಪಟ್ಟರು. ಗಂಡು ಸರಿಹೊಂದಲಿಲ್ಲ. ಕೊನೆಗೂ ವಾಸುದೇವರಾವ್‌ರನ್ನೇ ಹುಡುಕಿಕೊಂಡು ಹೊರಟರು.

ಮಂಡ್ಯದಲ್ಲಿ ಗುಬ್ಬಿ ಕಂಪನಿ ಕಾರ್ಯೋನ್ಮುಖವಾಗಿತ್ತು. ವಾಸುದೇವರಾವ್ ಈ ಮದುವೆಯ ವಿಷಯವನ್ನು ಮರೆತೇಬಿಟ್ಟಿದ್ದರು. ಯಾಕೆ ಅಂದ್ರೆ ಹೆಣ್ಣಿನ ಕಡೆಯವರಿಂದ ಯಾವ ಸಂದೇಶವೂ ಬಂದಿರಲಿಲ್ಲ. ಶಂಕರರಾವ್ ನಾಟಕ ನಡೆಯುತ್ತಿದ್ದ ಸ್ಥಳದ ಬಳಿಗೆ ಬಂದರು. ವಾಸುದೇವರಾವ್‌ಗೆ ವಿಚಾರ ತಿಳಿಸಿ ಮದುವೆಯ ದಿನಾಂಕವನ್ನು ನಿಂತ ಜಾಗದಲ್ಲೇ ಗೊತ್ತು ಮಾಡಿದರು. ಮೊದಲೇ ನಿರ್ಧರಿಸಿಕೊಂಡು ಬಂದಿದ್ದರು. ಇವರು ಒಪ್ಪಿಕೊಂಡರು.

ವಾಸುದೇವರಾವ್ ಹೈದರಾಬಾದಿನ ತನ್ನ ಅಣ್ಣ ಅತ್ತಿಗೆಗೆ ಪತ್ರ ಬರೆದರು. ಮದುವೆಗೆ ಬೇಕಾದ ಎಲ್ಲ ಸಿದ್ಧತೆಗಳನ್ನು ಜಯಮ್ಮನವರು ಮಾಡಿದರು. ಅಂತೂ ಮೈಸೂರಿನ ಸಮೀಪ 'ಪಶ್ಚಿಮವಾಹಿನಿ'ಯಲ್ಲಿ ಮದುವೆ ನಡೆಯಿತು.

ಮದುವೆಗೆ ಇವರ ತಂದೆಯವರಿಗೆ ಬರಲು ಸಾಧ್ಯವಾಗಲಿಲ್ಲ. ಹಣ್ಣುಹಣ್ಣು ಮುದುಕರಾಗಿದ್ದರು. ಅವರ ಬದಲಿಗೆ ಇವರ ತಂಗಿ, ತಮ್ಮ ಬಂದಿದ್ದರು. ಕಂಪನಿಯ ಜನಗಳೇ ಬಂಧು-ಬಳಗವಾಗಿದ್ದರು.

ಮದುವೆಯಾದ ನಂತರ ಹದಿನೈದು ದಿನಗಳ ಕಾಲ ಇವರಿಗೆ ರಜೆ ಕೊಟ್ಟರು. ನವಜೀವನದ ಜೇನುಸವಿಯನ್ನು ಕಂಡ ವಾಸುದೇವರಾವ್ ಮತ್ತೆ ಕಂಪನಿಗೆ ಬಂದರು.

ಹೆಂಡತಿಯನ್ನು ಆಕೆಯ ಮನೆಯಲ್ಲೇ ಬಿಟ್ಟರು. ಬಿಡುವು ಸಿಕ್ಕಾಗ ಇವರೇ ಹೋಗುತ್ತಿದ್ದರು. ಪ್ರತಿ ತಿಂಗಳು ಅಷ್ಟೋ ಇಷ್ಟೋ ಹಣವನ್ನು ಕಳಿಸುತ್ತಿದ್ದರು. ಊರಿಂದ ಊರಿಗೆ ತಿರುಗುತ್ತಿದ್ದುದರಿಂದ ವಾಸುದೇವರಾವ್‌ಗೆ ಕುಟುಂಬವನ್ನು ತನ್ನ ಜೊತೆಯಲ್ಲೇ ಕರೆದುಕೊಂಡು ಹೋಗಲು ಆಗುತ್ತಿರಲಿಲ್ಲ. ಹೆಂಡತಿ ಬೇರೆ ಸರ್ಕಾರಿ ಕೆಲಸದಲ್ಲಿದ್ದುದೂ ಒಂದು ಕಾರಣವಾಗಿತ್ತು. ಹೀಗೇ ಜೀವನ ಸಾಗತೊಡಗಿತು. ರಾಜ್ಯಾದ್ಯಂತ ಕಂಪನಿ ಚಲಿಸತೊಡಗಿತು.

ವಾಸುದೇವರಾವ್ ಹಾಸನದ ಕ್ಯಾಂಪ್‌ನಲ್ಲಿದ್ದಾಗ ಮೊದಲ ಮಗು ಜನಿಸಿದ ಸುದ್ದಿ ಮುಟ್ಟಿತು. ಇದರಿಂದ ತುಂಬಾ ರೋಮಾಂಚನವಾಯಿತು. ಏಕೆಂದರೆ ತನ್ನ ಹೆಂಡತಿಗೆ ಎರಡು ಬಾರಿ ಗರ್ಭವಿಳಿದಿತ್ತು. ಕಂಪನಿಯವರಿಗೆಲ್ಲ ಸಿಹಿ ಹಂಚಲಾಯ್ತು. ಮಗುವನ್ನು ನೋಡಿಕೊಂಡು ಬಂದರು.

'ಕುಂಭಕೋಣಂ' ನಲ್ಲಿ ಗುಬ್ಬಿ ಕಂಪನಿ ಬಿಡಾರ ಹೂಡಿತು. ಅಲ್ಲಿನ ಜಾತ್ರೆ ಮುಗಿಯುವ ವರೆಗೂ 'ಕುರುಕ್ಷೇತ್ರ' ನಾಟಕ ಆಡಿದರು. ಪಳನಿ, ರಾಮೇಶ್ವರ ಮೊದಲಾದ ಕಡೆಯೂ ಇವರು ಸುತ್ತಾಡಿ ಬಂದರು.

ಹೀಗೇ ಹಲವಾರು ವರ್ಷಗಳು ಕಳೆಯುತ್ತ ಬಂದವು. ಎರಡನೆಯದಾಗಿ ಗಂಡು ಮಗು ಹುಟ್ಟಿತು. ಕೆಲ ವರ್ಷಗಳ ನಂತರ ಮೂರನೆಯ ಮಗುವೂ ಆಯ್ತು.

ಮಕ್ಕಳ ಸಂಪೂರ್ಣ ಜವಾಬ್ದಾರಿಯನ್ನು ಹೆಂಡತಿಯೇ ನೋಡಿಕೊಳ್ಳುತ್ತಿದ್ದರು. 'ವಾಸುದೇವರಾವ್ ರಜೆ ಸಿಕ್ಕಾಗ ಬರುತ್ತಿದ್ದುದು, ಆಗಾಗ ಹಣ ಕಳಿಸುತ್ತಿದ್ದುದರ ಪರಿಣಾಮವಾಗಿ ಮಕ್ಕಳ ಜವಾಬ್ದಾರಿ ಅಷ್ಟೊಂದು ಕಷ್ಟವೆನಿಸಲಿಲ್ಲ. ಹೆಂಡತಿಯ ಅಣ್ಣನ ಮನೆಯವರು ಸಂಪೂರ್ಣ ಸಹಕಾರ ನೀಡುತ್ತಿದ್ದುದೂ ಮುಖ್ಯವಾಗಿತ್ತು.

## ಗುಬ್ಬಿ ವೀರಣ್ಣನವರ ಮರಣ

ಹೀಗೇ ವಾಸುದೇವರಾವ್ ಗುಬ್ಬಿ ಕಂಪನಿಯಲ್ಲಿ ಸುಮಾರು ೩೦-೪೦ ವರ್ಷ ಕೆಲಸ ಮಾಡಿರಬೇಕು. ಅನೇಕ ಏರುಪೇರುಗಳನ್ನು ಕಂಡಿರಬೇಕು. ಏನೇ ಆದರೂ ಅವರಿಗೆ ಆ ಕಂಪನಿಯ ವ್ಯಾಮೋಹದಿಂದ ಬಿಡಿಸಿಕೊಳ್ಳಲಾಗಲಿಲ್ಲ. ಚಲನಚಿತ್ರಗಳ ಪ್ರಭಾವ ಗಾಢವಾಗತೊಡಗಿತು. ನಾಟಕ ಪ್ರದರ್ಶನಕ್ಕೆ ಹಲವಾರು ನಿಯಮಗಳಾದವು. ಸರ್ಕಾರದ ಅನುಮತಿಗಾಗಿ ಕಾಯಬೇಕಾಯ್ತು. ಕಂಪನಿಯ ಬುನಾದಿಯಾಗಿದ್ದ ವೀರಣ್ಣನವರು ಸುಭದ್ರ, ಹೇಮರೆಡ್ಡಿ ಮಲ್ಲಮ್ಮ, ಗುಣಸಾಗರಿ,

ಸದಾರಮೆ ಮೊದಲಾದ ಚಿತ್ರಗಳನ್ನು ನಿರ್ಮಿಸಿದರು. ಇಷ್ಟಾದರೂ ವಾಸುದೇವರಾವ್ ಕಂಪನಿ ಬಿಟ್ಟು ಅಲುಗಲಿಲ್ಲ.

ಹೀಗಿರುವಾಗ ವೀರಣ್ಣನವರಿಗೆ ಕಾಮಾಲೆ ರೋಗ ಕಾಣಿಸಿಕೊಂಡಿತು. ಅದು ದಿನೇ ದಿನೇ ಉಲ್ಬಣಗೊಂಡಿತು. ಬೆಂಗಳೂರಿನ ಮಾರ್ಥಾಸ್ ಆಸ್ಪತ್ರೆಗೆ ದಾಖಲಾದರು. ಆ ಸಂದರ್ಭದಲ್ಲಿ ಕಂಪನಿ ತುರುವೇಕೆರೆಯಲ್ಲಿತ್ತು. ವೀರಣ್ಣನವರು ಮೃತರಾದರು. ಆಗ ಅವರ ಪಕ್ಕದ ಹಾಸಿಗೆಯಲ್ಲೇ ಕನ್ನಡದ ಕವಿ ಡಿ.ವಿ. ಗುಂಡಪ್ಪನವರೂ ಸಾವು-ಬದುಕಿನ ಮಧ್ಯೆ ಒದ್ದಾಡುತ್ತಿದ್ದರು.

ವೀರಣ್ಣನವರ ನಿಧನದ ವಾರ್ತೆ ತಿಳಿದು ಕಂಪನಿಯಲ್ಲಿ ನಾಟಕ ಬಂದ್ ಆಯ್ತು. ಎಲ್ಲ ಕಡೆಯೂ ಶೋಕದ ಮೌನ ಹರಡಿತು. ಅವರು ಬೆಳೆದ ಘನ ವ್ಯಕ್ತಿತ್ವದವರಾಗಿದ್ದರಿಂದ ಇಡೀ ನಾಡು ದುಃಖದಿಂದ ಬಿಕೋ ಎಂದಿತು.

ಆನಂತರದ ಕಂಪನಿಯ ಉಸ್ತುವಾರಿಯನ್ನು ಅವರ ಮಗ ಚೆನ್ನಬಸಣ್ಣನವರೇ ತೆಗೆದುಕೊಂಡು ಮುಂದುವರೆಸಿದರು.

## ಬಿ.ವಿ. ಕಾರಂತರ ಜೊತೆ

ಮೈಸೂರಿನಲ್ಲಿ ಕ್ಯಾಂಪ್ ನಡೆಯುತ್ತಿತ್ತು. ಅದು ಚೆನ್ನಪ್ಪನವರು ಕಂಪನಿ ನಿರ್ವಹಿಸುತ್ತಿದ್ದ ಕಾಲ. ಬಿ. ವಿ. ಕಾರಂತರು ಮನೆ ಬಿಟ್ಟು ಓಡಿಬಂದರು. ಬಂದವರೇ ಗುಬ್ಬಿ ಕಂಪನಿಗೆ ಸೇರಿಕೊಂಡರು. ಕಂಪನಿಯಲ್ಲಿ ಹೋಟೆಲ್ ನಡೆಸುತ್ತಿದ್ದ ನಂಜುಂಡಪ್ಪನವರನ್ನು ಏನಾದರೂ ಕೆಲಸ ಕೊಡಿ ಎಂದು ಕಾರಂತರು ಬೇಡಿದ್ದಕ್ಕೆ, ಹೋಟೆಲ್‌ಗೆ ಬೇಡ ನಾಟಕದಲ್ಲಿ ಪಾರ್ಟು ಮಾಡೆಂದು ಸೇರಿಸಿದ್ದರು.

ಬಿ. ವಿ. ಕಾರಂತರು ಮನೆ ಬಿಟ್ಟು ಓಡಿ ಬರಲು ಇದ್ದ ಕಾರಣ ಇಷ್ಟು; ಕಾರಂತರ ತಂದೆ ಸಾಹುಕಾರರ ಮನೆಯಲ್ಲಿ ಕೆಲಸ ಮಾಡುತ್ತಿದ್ದರು. ಆ ಸಾಹುಕಾರರ ಮಕ್ಕಳಿಗೆ ಕಾರಂತರು ಪಾಠ ಹೇಳಿಕೊಡುತ್ತಿದ್ದರು. ಕಾರಂತರಿಗೆ ಶಿವರಾಮ ಕಾರಂತರ ಪುಸ್ತಕಗಳೆಂದರೆ ಪಂಚಪ್ರಾಣ. ಆದರೆ ಅವರ ಪುಸ್ತಕ ಖರೀದಿಸಲು ಹಣ ಇರುತ್ತಿರಲಿಲ್ಲ.

ಒಂದು ಸಲ ಸಾಹುಕಾರರ ಮನೆಯಲ್ಲಿ ಹತ್ತು ರೂಪಾಯಿಯನ್ನು ಕದ್ದು, ಶಿವರಾಮ ಕಾರಂತರ ಪುಸ್ತಕ ಕೊಂಡು ತಲೆಯಡಿ ಇಟ್ಟುಕೊಂಡು ಮಲಗಿದ್ದರು. ಇದ್ದಕ್ಕಿದ್ದಂತೆ ಸಾಹುಕಾರರ ಮನೆಯಲ್ಲಿ ಗಲಾಟೆ ಶುರಾವಾಯ್ತು. ರಾತ್ರೋ ರಾತ್ರಿ ಯಾರಿಗೂ ಹೇಳದೇ ಕೇಳದೇ ಮನೆ ಬಿಟ್ಟು ಪರಾರಿಯಾಗಿದ್ದರು ಭಯದಿಂದ.

ವಾಸುದೇವರಾವ್ ಮತ್ತು ಬಿ.ವಿ. ಕಾರಂತರು ಮಿತ್ರರಂತಾದರು. ಜೊತೆಯಾಗಿ ಪಾತ್ರ ಮಾಡತೊಡಗಿದರು. ಅವರಿಗೆ ಮೇಕಪ್ ಮಾಡಲು ವಾಸುದೇವರಾವ್ ಸಹಕರಿಸುತ್ತಿದ್ದರು. ದಿನ ಕಳೆದಂತೆ ಇಬ್ಬರ ಸ್ನೇಹ ಗಾಢವಾಯಿತು.

ಬಿ. ವಿ.ಕಾರಂತರು ನಾಟಕದಲ್ಲಿ ಅಭಿನಯಿಸುವುದರ ಜೊತೆಗೆ ಹಿಂದೀ ಭಾಷೆಯನ್ನು ಓದುತ್ತಿದ್ದರು. ಬೆಳ್ಳಾವೆ ನರಹರಿಶಾಸ್ತ್ರಿಗಳ ಜೊತೆ ಸದಾ ಬೆರೆಯುತ್ತಿದ್ದರು. ಕಂಪನಿಯಲ್ಲಿ ಪ್ರತಿ ಶುಕ್ರವಾರ, ಶನಿವಾರ ಪೂಜೆ ನಡೆಯುತ್ತಿತ್ತು. ವಾಸುದೇವರಾವ್ ಭಜನೆ ಮಾಡಿದರೆ, ಕಾರಂತರು ಪೂಜೆ ಮಾಡುತ್ತಿದ್ದರು. ಬಂದ ದಕ್ಷಿಣೆ ಹಣವನ್ನು ಇವರಿಬ್ಬರೂ ದೋಸೆಯನ್ನು ತಿಂದು ಟೀ ಕುಡಿದು ಖರ್ಚು ಮಾಡುತ್ತಿದ್ದರು.

ಕೆಲವು ವರ್ಷಗಳ ನಂತರ ಕಂಪನಿಯಿಂದಲೇ ಕಾರಂತರನ್ನೂ ಹಾಗೂ ವೀರಣ್ಣನವರ ಮಗ ಶಿವಾನಂದರನ್ನೂ ದೆಹಲಿಯ ರಾಷ್ಟ್ರೀಯ ನಾಟಕ ಶಾಲೆಗೆ ಅಧ್ಯಯನಕ್ಕಾಗಿ ಕಳುಹಿಸಲಾಯ್ತು.

## ಚೋಮನ ದುಡಿ

ಮಂಡ್ಯದಲ್ಲಿ ಗುಬ್ಬಿ ಕಂಪನಿ ಶಿಬಿರ ಹೂಡಿತ್ತು. ವಾಸುದೇವರಾವ್ ನಾಟಕ ಮುಗಿಸಿಕೊಂಡು ಮಲಗಿದ್ದರು. ಆಗ ೧೯೭೪ ರ ಸಪ್ಟೆಂಬರ್ ಅಂತ ಕಾಣುತ್ತೆ. ಒಂದು ದಿನ ಬಿ. ವಿ. ಕಾರಂತರು ಬಂದವರೇ ಉತ್ಸಾಹದಿಂದ ಮಾತನಾಡು ತೊಡಗಿದರು. ಕಾರಂತರು ಮುಖ್ಯ ವಿಚಾರವನ್ನು ಪ್ರಸ್ತಾಪಿಸಿದರು; “ನಾನು 'ಚೋಮನ ದುಡಿ' ಎಂಬ ಸಿನಿಮಾ ಮಾಡ್ತಿದ್ದೀನಿ. ಅದರಲ್ಲಿ ನೀನೇ ಚೋಮನ ಪಾತ್ರ ಮಾಡ್ಬೇಕು” ಎಂದರು. ವಾಸುದೇವರಾವ್‌ಗೆ ಆಶ್ಚರ್ಯವಾಯಿತು. ಇಷ್ಟವಿದ್ದರೂ ಕಂಪನಿಯವರು ನನ್ನನ್ನು ಕಳಿಸುತ್ತಾರೋ ಇಲ್ಲವೋ ಎಂಬ ಸಂಶಯ ಕಾಡಿತು. ಹೇಳಿದರು; 'ನಾನು ಕಂಪನಿ ಬಿಟ್ಟು ಬರಲು ಕಷ್ಟವಾಗುತ್ತದೆ. ನಾಟಕ ಬಿಟ್ಟರೆ ತೊಂದರೆಯಾಗುತ್ತದೆ. ಯಜಮಾನರನ್ನು ವಿಚಾರಿಸುತ್ತೇನೆ. ಅವರು ಒಪ್ಪಿಗೆ ನೀಡಿದರೆ ಬರುತ್ತೇನೆ' ಎಂದರು. ಕಾರಂತರು ಹೋದರು. ಎಷ್ಟೋ ದಿನಗಳು ಕಳೆದವು. ವಾಸುದೇವರಾವ್ ಸಿನಿಮಾದ ಸಂಗತಿಯನ್ನು ಮರೆತುಬಿಟ್ಟರು.

ಒಂದು ದಿನ ವಾಸುದೇವರಾವ್‌ಗೆ ಒಂದು ಪತ್ರ ಬಂದಿತು, ಬಿ.ವಿ.ಕಾರಂತರು ಬರೆದಿದ್ದರು :

‘ಪ್ರೀತಿಯ ವಾಸುದೇವರಾವ್,

ಚೋಮನ ಪಾತ್ರಕ್ಕಾಗಿ ಎಲ್ಲ ಕಡೆಯೂ ಹುಡುಕಿದೆ. ಅದಕ್ಕೆ ತಕ್ಕಂಥವರು ಯಾರೂ ಸಿಕ್ಕಲಿಲ್ಲ. ನೀನೇ ಅದಕ್ಕೆ ಸರಿಯಾಗಿ ಹೊಂದುತ್ತೀಯ. ದಯವಿಟ್ಟು ನನಗೆ ನಿರಾಶೆ ಮಾಡಬೇಡ. ನೀನು ಬಿಟ್ಟಿಯಾಗಿ ಪಾತ್ರ ಮಾಡಬೇಡ. ಎರಡು ಸಾವಿರ ದುಡ್ಡನ್ನೂ ಕೊಡುತ್ತೇನೆ. ಹಾಗೂ ಯಜಮಾನರಿಗೂ ಹೇಳಿ ಒಪ್ಪಿಸುತ್ತೇನೆ.

ವಾಸುದೇವರಾವ್ ಕಾರಂತರ ಈ ಕಾಗದ ಹಿಡಿದು ಯೋಚಿಸತೊಡಗಿದರು. ಎರಡು ಸಾವಿರ ಎಂಬುದು ತನ್ನ ಜೀವಮಾನದಲ್ಲೇ ಕಾಣದ ಭಾರೀ ಮೊತ್ತವಾಗಿತ್ತು. ಸಿನಿಮಾ ಮಾಧ್ಯಮಕ್ಕೆ ಕಾಲಿಡುವ ಅವಕಾಶ ಬೇರೆ ಒದಗಿಬಂದಿತ್ತು.

ಜೊತೆಯ ಸ್ನೇಹಿತರೆಲ್ಲ ಹುರಿದುಂಬಿಸಿದರು. ಇವರು ಕಾಗದ ಹಿಡಿದು ಕೊಂಡು ಚಿಂತಿಸುತ್ತಿದ್ದುದನ್ನು ನೋಡಿ ಚಿಕ್ಕಯಜಮಾನರು ಹತ್ತಿರ ಬಂದು ವಿಚಾರಿಸಿದರು. ಅವರಿಗೂ ಏನು ಹೇಳಬೇಕೆಂದು ಗೊತ್ತಾಗಲಿಲ್ಲ. ಚಿಕ್ಕ ಯಜಮಾನರ ಈ ದಿವ್ಯಮೌನವನ್ನು ಕಂಡು ಅವರ ಅಕ್ಕ ಸ್ವರ್ಣಮ್ಮನವರು ಕಳಿಸಿಕೊಡುವಂತೆ ಸಲಹೆ ನೀಡಿದರು. ಕೊನೆಗೂ ಯಜಮಾನರ ಒಪ್ಪಿಗೆ ದೊರೆಯಿತು. ಕೂಡಲೇ ವಾಸುದೇವರಾವ್, ಕಾರಂತರಿಗೆ ಪತ್ರ ಬರೆದರು :

‘ಆತ್ಮೀಯರಾದ ಬಿ.ವಿ. ಕಾರಂತರೆ,

ನಾನು ಸಿನಿಮಾಕ್ಕೆ ಬರಲು ನಿರ್ಧರಿಸಿದ್ದೇನೆ. ಯಜಮಾನರೂ ಒಪ್ಪಿದ್ದಾರೆ. ಆದರೆ ನನಗೆ 'ಚೋಮನ ದುಡಿ' ಎಂದಿರಲ್ಲ ಅದರ ಕತೆ ಗೊತ್ತಿಲ್ಲ. ದಯವಿಟ್ಟು ಪುಸ್ತಕ ಕಳಿಸಿ. ನಾನು ಬರುತ್ತೇನೆ.'

ಮತ್ತೆ ಬಿ.ವಿ. ಕಾರಂತರಿಂದ ಪತ್ರ ಬಂತು. ನೀವು ಒಪ್ಪಿದ್ದು ನನ್ನ ಭಾಗ್ಯ, ಬೆಂಗಳೂರಿನಲ್ಲಿ ಇಂಥ ಕಡೆ ಆ ಪುಸ್ತಕ ಕೊಟ್ಟಿರುತ್ತೇನೆ, ತಾವು ಪಡೆದುಕೊಳ್ಳಿ ಎಂದು ಅದರಲ್ಲಿ ಬರೆದಿತ್ತು. ವಾಸುದೇವರಾವ್ ಆ ವಿಳಾಸ ಹುಡುಕಿದರು. ಪುಸ್ತಕ ಸಿಕ್ಕಿತು. ಓದಿದರು. ಪಾತ್ರ ತುಂಬಾ ಇಷ್ಟವಾಯಿತು.

ಹೀಗಿರುವಾಗ ಬಿ. ವಿ. ಕಾರಂತರಿಂದ ಒಂದು ಟೆಲಿಗ್ರಾಂ ಬಂತು. ಯಾವಾಗ ಬರಬೇಕು, ಎಲ್ಲಿಗೆ ಬರಬೇಕು ಎಂಬುದು ಅದರಲ್ಲಿತ್ತು. ಆಗ 'ಸಾಹುಕಾರ' ಎಂಬ ನಾಟಕ ನಡೆಯುತ್ತಿತ್ತು. ವಾಸುದೇವರಾವ್ ಪ್ರಮುಖ ಪಾತ್ರದಲ್ಲಿದ್ದರು. ಬಿಟ್ಟು ಹೋಗಲು ತೀರಾ ಕಷ್ಟವಾಗುವುದೆಂಬ ಆತಂಕ ಶುರುವಾಯ್ತು.

ಆ ಸಂದರ್ಭದಲ್ಲಿ ಮೈಸೂರು ಒಡೆಯರಾಗಿದ್ದ ಚಾಮರಾಜ ಒಡೆಯರು ತೀರಿಕೊಂಡರು. ಎಲ್ಲಾ ಬಂದ್ ಆಯ್ತು. ಕಂಪನಿಗೆ ರಜೆ ಸಿಕ್ಕಿತು. ಯಜಮಾನರ ಅನುಮತಿ ಪಡೆದು ವಾಸುದೇವರಾವ್ ಉಡುಪಿಯತ್ತ ಪ್ರಯಾಣ ಬೆಳೆಸಿದರು.

ಉಡುಪಿಗೆ ತಲುಪಿದರು. 'ಚೋಮನ ದುಡಿ'ಯ ನಿರ್ಮಾಪಕರಾಗಿದ್ದ ಮುದ್ದು ಸುವರ್ಣ ಎಂಬುವರ ಹೋಟೆಲಿನಲ್ಲೇ ಇಳಿದುಕೊಂಡರು.

ಬಿ.ವಿ. ಕಾರಂತರು ಬಂದರು. ತುಂಬಾ ಸಂತೋಷಪಟ್ಟರು. ಹಾಗೇ ಇವರ ಜೊತೆ ಪಾತ್ರ ಮಾಡುವಂಥವರನ್ನೂ ಪರಿಚಯ ಮಾಡಿಕೊಟ್ಟರು. ಅವರಲ್ಲಿ, ಪದ್ಮಾ ಕುಮಟಾ, ಸುಂದರರಾಜ್, ಜಯರಾಜ್ ಮೊದಲಾದವರಿದ್ದರು.

ವಾಸುದೇವರಾವ್ 'ದುಡಿ'ಯನ್ನು ನೋಡೇ ಇರಲಿಲ್ಲ. ಅದನ್ನು ಬಡಿಯುವುದನ್ನು ಕಲಿಸಲು ಒಬ್ಬ ಹರಿಜನ ವ್ಯಕ್ತಿಯನ್ನು ಕರೆಸಿದ್ದರು. ಪ್ರತಿದಿನ ಎರಡು ಗಂಟೆಯ ಕಾಲ ಆತನೊಡನೆ ಇವರು ದುಡಿ ಬಡಿಯುವುದನ್ನು ಅಭ್ಯಾಸ ಮಾಡಿದರು. ಹೊಲ ಉಳುವುದನ್ನು ಅಭ್ಯಾಸ ಮಾಡಿದರು. ತೆಂಗಿನಮರ ಹತ್ತುವ ಸನ್ನಿವೇಶ ಇದ್ದುದರಿಂದ ಇವರಿಗೆ ಮರ ಹತ್ತಲೂ ಬರುತ್ತಿರಲಿಲ್ಲ. ಊಟ ಮಾಡಿ ಎಲ್ಲರೂ ಮಲಗಿದಾಗ ತೆಂಗಿನ ಮರ ಹತ್ತುವುದನ್ನು ಕಲಿಯಲಾರಂಭಿಸಿದರು. ಒಮ್ಮೆ ಜಾರಿಬಿದ್ದರು. ಮೈಕೈಯೆಲ್ಲಾ ತರಚಿಕೊಂಡು ಜ್ವರ ಬಂತು. ಕಾರಂತರು ಇದನ್ನು ಗುರುತಿಸಿ ಆಸ್ಪತ್ರೆಗೆ ತೋರಿಸಿ ಇಂಜೆಕ್ಷನ್ ಕೊಡಿಸಿದರು.

ಶೂಟಿಂಗ್‌ಗೆ ಎಲ್ಲ ಸಿದ್ಧತೆಗಳಾದವು. ಮುಹೂರ್ತ ಗೊತ್ತಾಯಿತು. ಪಾಣೆ ಮಂಗಳೂರು ಬಳಿ ಮುಹೂರ್ತವಿತ್ತು. ಮುಹೂರ್ತಕ್ಕೆ 'ಚೋಮನ ದುಡಿ' ಕೃತಿಯ ಲೇಖಕರಾದ ಶಿವರಾಮ ಕಾರಂತರು ಆಗಮಿಸಿದ್ದರು. ಆರಂಭದಲ್ಲಿ ಹೊಲ ಉಳುವ ದೃಶ್ಯವಿತ್ತು.

ಬಿ. ವಿ. ಕಾರಂತರು ನಿರ್ದೇಶಕರಾಗಿದ್ದುದರಿಂದ, ವಾಸುದೇವರಾವ್‌ರಿಗೆ ಹೇಳಿದರು, ನೀವು ಶಿವರಾಮ ಕಾರಂತರ ಬಳಿಗೆ ಹೋಗಿ ವೇಷಭೂಷಣ ಸರಿಯಾಗಿದೆಯಾ ಕೇಳಿರಿ, ಎಂದು. ಕೂಡಲೇ ವಾಸುದೇವರಾವ್ ಮುಹೂರ್ತಕ್ಕೆ ಹಾಜರಿದ್ದ ಶಿವರಾಮ ಕಾರಂತರ ಮುಂದೆ ಹೋಗಿ ಪಾತ್ರಕ್ಕೆ ನಾನು ಸರಿಯಾಗಿ ಸಿದ್ಧನಾಗಿರುವೆನೇ ? ಎಂದು ಕೇಳಿದರು. ಶಿವರಾಮ ಕಾರಂತರು ದಿಟ್ಟಿಸಿ ನೋಡಿದರು. ಸ್ವಲ್ಪ ಹೊತ್ತಿನ ನಂತರ, “ಎಲ್ಲಾ ಸರಿಯಾಗಿದೆ. ಆದರೆ ನೀನು ಬಿಳಿ ಮಾದಿಗನಾಗಿದ್ದೀಯ” ಎಂದರು. ಆಗ ಕಪ್ಪು ಬಣ್ಣವನ್ನು ಇಡೀ ದೇಹಕ್ಕೆಲ್ಲ ಬಳಿದುಕೊಳ್ಳಬೇಕಾಯ್ತು. ಚಿತ್ರೀಕರಣ ನಡೆಯತೊಡಗಿತು.

ವಾಸುದೇವರಾವ್ ಅಭಿನಯಿಸುವಾಗ ಮೈದುಂಬಿಕೊಳ್ಳುತ್ತಿದ್ದರು. ಜನ ಸುತ್ತ ಸೇರಿ ಪ್ರಶಂಸಿಸುತ್ತಿದ್ದರು. ಬಿ.ವಿ. ಕಾರಂತರು, ನೀವು ಅಭಿನಯಿಸುವಾಗ 'ಚೋಮ ಎಂದುಕೊಂಡೇ ಸಹಜವಾಗಿರಬೇಕು' ಎಂದು ಹೇಳುತ್ತಿದ್ದರು. ಹೋಲ ಉಳುವಾಗ ಬಿದ್ದು ಎದ್ದು ಕಷ್ಟ ಅನುಭವಿಸಬೇಕಾಗಿತ್ತು.

ಅಂತೂ ಚಿತ್ರೀಕರಣ ಮುಗಿಯಿತು. ಇವರ ಕೈಗೆ ಎರಡು ಸಾವಿರ ರೂಪಾಯಿ ಕೊಟ್ಟರು. ತನ್ನ ಜೀವಮಾನದಲ್ಲೇ ಕಂಡಿರದ ಭಾರೀ ಹಣ ಅದಾಗಿತ್ತು. ಮಾತಾಡಲಾಗದಂಥ ವಿಸ್ಮಯದಿಂದ ಮತ್ತೆ ಕಂಪನಿಗೆ ಮರಳಿದರು.

ಚಳ್ಳಕೆರೆಯಲ್ಲಿ ನಾಟಕ ನಡೆಯುತ್ತಿತ್ತು. ಅಲ್ಲಿ ವಾಸುದೇವರಾವ್ ಅವರಿಗೆ ಕಾರಂತರು ಪತ್ರ ಬರೆದರು. ಇಂತಹ ದಿನ ಸಿನಿಮಾದ ಪ್ರದರ್ಶನವಿದೆ. ನೀವು ಬನ್ನಿ ಎಂದು ತಿಳಿಸಿದ್ದರು. ಇವರು ಅಂಥ ದಿನ ಶೋ ವೀಕ್ಷಿಸಲು ಹೋದರು.

ಪತ್ರಿಕೆಯವರು ತುಂಬಿದ್ದರು. ಸಿನಿಮಾವನ್ನು ವೀಕ್ಷಿಸಿದ ನಂತರ ಮೆಚ್ಚಿಕೊಂಡು ಇವರ ಸುತ್ತ ಮುತ್ತಿಕೊಂಡು ಮಾತನಾಡಿಸಿದರು. ಪತ್ರಿಕೆಗಳಲ್ಲಿ ಒಳ್ಳೆ ಅಭಿಪ್ರಾಯವನ್ನು ಇವರ ಬಗ್ಗೆ ಬರೆದರು. ಕಂಪನಿಯಲ್ಲಿ ಒಳ್ಳೆ ಅಭಿನಂದನೆಗಳು ದೊರೆತವು.

ಮುಂಬಯಿಯಲ್ಲಿ ಚಿತ್ರೋತ್ಸವ ನಡೆಯಿತು. ಅಲ್ಲಿಗೆ 'ಚೋಮನ ದುಡಿ'ಯು ಆಯ್ಕೆಗೊಂಡಿತು. ಬಿ. ವಿ. ಕಾರಂತ ಮತ್ತು ಪದ್ಮಾಕುಮಟಾ ಅವರ ಜೊತೆ ಪ್ರಥಮ ಬಾರಿಗೆ ವಿಮಾನದಲ್ಲಿ ಪ್ರಯಾಣ ಮಾಡಿದರು. ಮುಂಬಯಿ ತಲುಪಿ ಚಿತ್ರೋತ್ಸವದಲ್ಲಿ ಭಾಗವಹಿಸಿದರು.

'ಚೋಮನ ದುಡಿ' ಚಿತ್ರ ಶುರುವಾಯ್ತು. ಸಭಿಕರೆಲ್ಲ ಗಂಭೀರರಾದರು. ಚಿತ್ರ ಮುಗಿದ ತಕ್ಷಣ ಭಯಂಕರವಾಗಿ ಚಪ್ಪಾಳೆ ಹೊಡೆದರು. ಚಿತ್ರೋತ್ಸವದಲ್ಲಿ ಪಾಲ್ಗೊಂಡ ಎಲ್ಲ ಚಿತ್ರಗಳಿಗಿಂತ ಈ ಚಿತ್ರ ವಿಶೇಷ ಮನ್ನಣೆಗೆ ಪಾತ್ರವಾಯಿತು.

ವಾಸುದೇವರಾವ್ ಮತ್ತೆ ಕಂಪನಿಗೆ ಬಂದರು.

ತಿಪಟೂರಿನಲ್ಲಿ ಗುಬ್ಬಿ ಕಂಪನಿ ಬೀಡುಬಿಟ್ಟಿತ್ತು. ವಾಸುದೇವರಾವ್ ನಾಟಕದಲ್ಲಿ ಪಾತ್ರ ಮಾಡುತ್ತಿದ್ದರು. ಆಗ ತಿಪಟೂರಿನ ಗುಬ್ಬಿ ಹೋಟೆಲಿನವನೊಬ್ಬ ನಾಟಕ ನಡೆಯುತ್ತಿದ್ದ ಸ್ಥಳಕ್ಕೆ ಬಂದು ನಿಮಗೆ ಯಾವುದೋ ಪ್ರಶಸ್ತಿ ಬಂದಿದೆಯೆಂದು ತಿಳಿಸಿದ. ಆದರೆ ಅದರ ಬಗ್ಗೆ ಇವರು ಕಿವಿಗೊಡಲಿಲ್ಲ.

ಆ ದಿನ ಬೆಳಿಗ್ಗೆ ವಾಸುದೇವರಾವ್ ಗಾಢ ನಿದ್ರೆಯಲ್ಲಿದ್ದರು. ಯಾರೋ ಧಡಧಡನೆ ಬಾಗಿಲು ಬಡಿದರು. ಎಷ್ಟೋ ಹೊತ್ತಿನ ಮೇಲೆ ವಾಸುದೇವರಾವ್

ಕಣ್ಣುಜ್ಜಿಕೊಂಡು ಬಾಗಿಲು ತೆರೆದರು. ತಕ್ಷಣ ಕೊರಳಿಗೆ ಹೂವಿನ ಹಾರ ಬಿತ್ತು. ನೋಡಿದರೆ ಲಾಯರ್ ! ಕೈಲೊಂದು ಪೇಪರ್ ಹಿಡಿದಿದ್ದಾರೆ ! ಕೂಡಲೇ ವಾಸುದೇವರಾವ್ ಕೈಗೆ ಪೇಪರ್ ಕೊಟ್ಟರು. ಇವರಿಗೆ ದಿಗ್ಭ್ರಮೆಯಾಯಿತು. ಅಳು, ನಗು ಎಲ್ಲ ಒಟ್ಟಿಗೇ ಮುಖದಲ್ಲಿ ಮೂಡಿದವು. ಚೋಮನ ಪಾತ್ರಕ್ಕೆ ರಾಷ್ಟ್ರಪ್ರಶಸ್ತಿ ಬಂದಿತ್ತು. 'ಚೋಮನ ದುಡಿ' ಚಿತ್ರಕ್ಕೂ ರಾಷ್ಟ್ರಪ್ರಶಸ್ತಿ ಲಭಿಸಿತ್ತು.

ವಾಸುದೇವರಾವ್ ಓಡಿದರು. ಮನೆಯ ಮಹಡಿಯ ಮೇಲೆ ಕೂತಿದ್ದ, ಯಜಮಾನರಿಗೆ ತನ್ನಲ್ಲಿದ್ದ ಹೂವಿನ ಹಾರ ಹಾಕಿ ನಮಸ್ಕರಿಸಿದರು. ವಿಷಯ ತಿಳಿಸಿದರು. ಯಜಮಾನರು ತುಂಬ ಸಂತೋಷಪಟ್ಟರು. ಇಡೀ ಕಂಪನಿಯ ಜನರಿಗೆಲ್ಲ ಅವರೇ ಕಾಫಿ ಕೊಡಿಸಿದರು.

ಯಾವ ಯಾವ ಕಡೆಯಿಂದಲೂ ದೂರವಾಣಿಗಳು ಇವರಿಗೆ ಅಭಿನಂದನೆ ಸೂಚಿಸಿದವು. ತಿಪಟೂರಿನ ವಿವಿಧ ಕಡೆ ಸನ್ಮಾನಗಳು ನಡೆದವು. ಹೆಂಡತಿ ಮಕ್ಕಳು ಹಾಗೂ ಸಂಬಂಧಿಕರು ಹರ್ಷಿತರಾದರು. ಬಾಂಬೆ ಮತ್ತಿತರ ಕಡೆ ಇವರಿಗೆ ಸನ್ಮಾನಗಳಾದವು.

ಆ ಸಂದರ್ಭ ೧೯೭೬. ಕರ್ನಾಟಕದಲ್ಲಿ ದೇವರಾಜ ಅರಸು ಮುಖ್ಯಮಂತ್ರಿಯಾಗಿದ್ದರು. ಅವರ ಅವಧಿಯಲ್ಲಿ 'ಚೋಮನ ದುಡಿ'ಗೆ ರಾಜ್ಯಪ್ರಶಸ್ತಿಯೂ ಬಂತು. ನಟನೊಬ್ಬನಿಗೆ ರಾಷ್ಟ್ರಪ್ರಶಸ್ತಿ ಬಂದದ್ದು ಇದೇ ಮೊದಲೆನಿಸುತ್ತದೆ. ವಾಸುದೇವರಾವ್ ತಮ್ಮ ಪರಿಣಾಮಕಾರಿಯಾದ ಅಭಿನಯದ ಮೂಲಕ ಕಾರಂತರ ಚೋಮನನ್ನು ಜೀವಂತವಾಗಿಸಿದ್ದರು. ಇಷ್ಟು ವರ್ಷ ರಂಗಭೂಮಿಯಲ್ಲಿ ಮುಳುಗಿದ್ದರ ಪ್ರತಿಫಲವೆಂಬಂತೆ ಇವರಿಗೆ ಅಪಾರವಾದ ಕೀರ್ತಿ ಲಭಿಸಿತು. 'ಚೋಮನ ದುಡಿ' ಲಂಡನ್‌ನಲ್ಲಿ ಪ್ರದರ್ಶನಗೊಂಡಿತು. ಅಲ್ಲಿನ ಜನರೆಲ್ಲ ವಾಸುದೇವರಾವ್‌ರ ಅಭಿನಯಕ್ಕೆ ಮಾರುಹೋದರು. ಐವತ್ತಾರು ವರ್ಷದ ವಾಸುದೇವರಾವ್ ತಮ್ಮ ಮಾಗಿದ ಜೀವನಕ್ಕೆ ತಕ್ಕ ಪ್ರತಿಫಲ ಕಂಡು ಬೆರಗಾದರು.

## ಮೃಣಾಲ್ ಸೇನ್‌ರೊಂದಿಗೆ

'ಚೋಮನ ದುಡಿ'ಗೆ ರಾಷ್ಟ್ರಪ್ರಶಸ್ತಿ ಬಂದಾಗ ಆ ಚಿತ್ರವನ್ನು ಪ್ರಖ್ಯಾತ ನಿರ್ದೇಶಕ ಮೃಣಾಲ್ ಸೇನ್ ನೋಡಿದದರು. ಅದರಲ್ಲಿನ ಚೋಮನ ಪಾತ್ರದ ವಾಸುದೇವರಾವ್ ಬಗ್ಗೆ ಅಭಿಮಾನ ಹೊಂದಿದ್ದರು. ಹೀಗಿರುವಾಗ ಪ್ರೇಮಚಂದ್ರ ಕಾದಂಬರಿಯನ್ನು 'ಒಕವೂರಿಕಥಾ' ಎಂದು ಸಿನಿಮಾ ಮಾಡಲು ಕೈಹಾಕಿದ್ದರು.

ಇದನ್ನು ತೆಲುಗು ಭಾಷೆಯಲ್ಲಿ ನಿರ್ಮಿಸತೊಡಗಿದ್ದರು. ಆ ಚಿತ್ರಕ್ಕೆ ವಾಸುದೇವರಾವ್‌ರನ್ನೇ ಹಾಕಿಕೊಳ್ಳಲು ತೀರ್ಮಾನಿಸಿದರು. ಇವರನ್ನು ಒಪ್ಪಿಸಲು 'ಸಂಸ್ಕಾರ' ಚಿತ್ರದ ನಿರ್ದೇಶಕ ಪಟ್ಟಾಭಿ ರಾಮರೆಡ್ಡಿಯವರಿಗೆ ತಿಳಿಸಿದ್ದರು.

ಒಂದು ದಿನ ಪಟ್ಟಾಭಿಯವರು ಇವರನ್ನು ಹುಡುಕಿಕೊಂಡು ಕಂಪನಿಗೆ ಬಂದರು. ಈ ತಕ್ಷಣವೇ ಹೈದರಾಬಾದ್‌ಗೆ ಹೋಗಿ ಅಲ್ಲಿನ 'ಸರೋವರ್ ಹೋಟೆಲ್' ತಲುಪಲು ಸೂಚಿಸಿದರು. ವಾಸುದೇವರಾವ್‌ಗೆ ಕುತೂಹಲವಾಯ್ತು. ಯಜಮಾನರಿಗೆ ತಿಳಿಸಿ ಒಪ್ಪಿಗೆ ಪಡೆದು ಹೈದರಾಬಾದ್‌ಗೆ ಪ್ರಯಾಣಿಸಿದರು.

ಸೈಕಲ್ ರಿಕ್ಷಾದಲ್ಲಿ ಕೂತು ಸರೋವರ ಹೋಟೆಲ್ ಬಳಿ ಹೋದರು. ಮಹಡಿ ಏರಿದರು. ಅಲ್ಲಿ ಮೃಣಾಲ್ ಸೇನ್ ಕೂತಿದ್ದರು. ಇವರನ್ನು ನೋಡಿದ ತಕ್ಷಣ ಓಡಿ ಬಂದು ಅಪ್ಪಿಕೊಂಡರು. ಹಿಂದಿಯಲ್ಲಿ ಮಾತನಾಡುತ್ತ, ಚಿತ್ರದ ಕತೆಯನ್ನು ವಿವರಿಸಿದರು. ನೀನು ಅಭಿನಯಿಸಬಲ್ಲೆ ಎಂದು ಉತ್ಸಾಹ ತುಂಬಿದರು. ಇವರು ಒಪ್ಪಿಕೊಂಡರು. ಈ ಚಿತ್ರದಲ್ಲಿ ನಟಿಸಲು ಐದು ಸಾವಿರ ಕೊಡುವುದಾಗಿ ತಿಳಿಸಿದ್ದರು.

ವಾಸುದೇವರಾವ್‌ರ ಗಾಂಭೀರ್ಯ, ಸರಳತೆಗಳನ್ನು ಮೃಣಾಲ್ ತುಂಬಾ ಇಷ್ಟಪಟ್ಟಿದ್ದರು. ಟೆಲಿಗ್ರಾಂ ಕಳುಹಿಸುವುದಾಗಿ ಹೇಳಿದರು. ಇವರು ಬೆಂಗಳೂರಿಗೆ ವಾಪಸ್ಸಾದರು.

ಆ ಟೆಲಿಗ್ರಾಂ ಬಂತು. ಚಿತ್ರೀಕರಣಕ್ಕೆ ಹೋದರು. ಶೂಟಿಂಗ್ ಮುಗಿಯುವವರೆಗೂ ಗಡ್ಡ ಬೋಳಿಸದಂತೆ, ತಲೆಗೆ ಎಣ್ಣೆ ಹಾಕದಂತೆ ಇವರಿಗೆ ಮೃಣಾಲ್ ಸೂಚಿಸಿದ್ದರು. ತೆಲುಗು ಅಷ್ಟೊಂದು ಚೆನ್ನಾಗಿ ಬರುತ್ತಿರಲಿಲ್ಲ. ಕಷ್ಟ ಪಟ್ಟು ಅಭ್ಯಾಸ ಮಾಡಿದರು. ನಟಿಸಿದರು. ಇವರ ಜೊತೆ ನಾರಾಯಣರಾವ್ ಮಮತಾ ಶಂಕರ್ ಮುಂತಾದವರಿದ್ದರು. ಚಿತ್ರೀಕರಣ ಮುಗಿಯಿತು. ಚಿತ್ರ ಬಿಡುಗಡೆಯಾಗಿ ಭಾರೀ ಯಶಸ್ಸು ಪಡೆಯಿತು.

ಈ ಚಿತ್ರವನ್ನು ವೀಕ್ಷಿಸಿದ ಮಣಿರತ್ನಂ ಇವರನ್ನು ಮೆಚ್ಚಿದರು. 'ಪಲ್ಲವಿ ಅನುಪಲ್ಲವಿ' ಚಿತ್ರಕ್ಕೆ ಇವರನ್ನು ಆಯ್ಕೆ ಮಾಡಿಕೊಂಡರು. ತಮಿಳಿನ 'ನಾಯಗನ್' ಚಿತ್ರದಲ್ಲಿ ಇವರು ನಟಿಸಿದರು. ಪ್ರಸಿದ್ಧ ನಟ ಕಮಲ್ ಹಾಸನ್‌ರ ತಂದೆಯ ಪಾತ್ರ ಮಾಡಿದರು. ಅವರ ವಿಶ್ವಾಸಕ್ಕೂ ಪಾತ್ರರಾದರು.

ಇದರ ನಂತರ ತೆಲುಗಿನಲ್ಲಿ ಕೋದಂಡ ರಾಮರೆಡ್ಡಿ ನಿರ್ದೇಶನದ 'ರಾಕ್ಷಸುಡು' ಚಿತ್ರಕ್ಕೆ ಆಹ್ವಾನ ಬಂತು. ಆ ಚಿತ್ರದಲ್ಲಿ ಮೆಗಾಸ್ಟಾರ್ ಚಿರಂಜೀವಿಯೊಡನೆ ಅಭಿನಯಿಸಿದರು. ಈ ಚಿತ್ರವೂ ಯಶಸ್ವಿಯಾಯಿತು.

ಹೀಗೆ 'ಚೋಮನ ದುಡಿ'ಯ ನಟನೆಗೆ ಪ್ರಶಸ್ತಿ ಬಂದ ತರುವಾಯ ಚಿತ್ರರಂಗ ಇವರ ಬಗ್ಗೆ ಆಸಕ್ತಿ ವಹಿಸಿತು. ಸಿನಿಮಾ ಹಾಗೂ ನಾಟಕ ಎರಡರಲ್ಲೂ ಜೀವನವನ್ನು ತೊಡಗಿಸಿಕೊಳ್ಳಲು ಕಠಿಣವಾಯ್ತು. ಗುಬ್ಬಿ ಕಂಪನಿಯ ಇವರ ಯಜಮಾನರು ನೀನು ಸಿನಿಮಾ ಕ್ಷೇತ್ರಕ್ಕೆ ಒತ್ತು ಕೊಡು ಎಂದು ಹೇಳಿದರು. ಅನಿವಾರ್ಯವಾದಾಗ ಕರೆಸಿಕೊಳ್ಳುವುದಾಗಿ ಭರವಸೆ ನೀಡಿದರು. ಸಂಪೂರ್ಣವಾಗಿ ಚಲನಚಿತ್ರದ ಕಡೆಗೇ ಮನಸ್ಸು ಕೊಟ್ಟರು.

ನಾಟಕ ರಂಗದಲ್ಲಿದ್ದುದಕ್ಕಿಂತ ಸಿನಿಮಾ ರಂಗದಿಂದ ಇವರಿಗೆ ಹಣ, ಖ್ಯಾತಿ ಬಂದವು. ಸ್ವಂತ ಬಾಡಿಗೆ ಮನೆ ಮಾಡಿ ಜೀವನ ಆರಂಭಿಸಿದರು. ಬದುಕು ಸ್ವಲ್ಪ ನೆಮ್ಮದಿ ನೀಡತೊಡಗಿತು. ಸ್ವಲ್ಪ ಕಾಲದ ನಂತರ ಸರ್ಕಾರ ಮನೆ ಕಟ್ಟಿಕೊಳ್ಳಲು ಜಾಗಕೊಟ್ಟಿತು. ಕೇವಲ ಎರಡು ಸಾವಿರದ ಆರು ನೂರು ರೂಗಳಿಗೆ ಸೈಟ್ ಕೊಟ್ಟಿತು.

ಬಂದ ಹಣವನ್ನು ದುಂದು ವೆಚ್ಚ ಮಾಡುತ್ತಿರಲಿಲ್ಲ. ಮಿತವಾಗಿ ಬಳಸುತ್ತಿದ್ದರು. ಸಾಧ್ಯವಾದಷ್ಟನ್ನು ಬ್ಯಾಂಕ್‌ನಲ್ಲಿಡುತ್ತಿದ್ದರು. ಹೀಗೆ ಕಷ್ಟಪಟ್ಟು ಉಳಿಸಿದ ಹಣದಲ್ಲಿ ಮನೆ ಕಟ್ಟಿದರು. ಮಕ್ಕಳನ್ನು ಓದಿಸತೊಡಗಿದರು.

'ಚೋಮನ ದುಡಿ'ಯ ತರುವಾಯ ಕನ್ನಡದಲ್ಲಿ 'ಹುಲಿ ಬಂತು ಹುಲಿ' ಚಿತ್ರಕ್ಕೆ ಆಯ್ಕೆಯಾದರು. ಇದರ ನಂತರ ಕಾಶೀನಾಥ್ ನಿರ್ದೇಶನದ 'ಅಪರಿಚಿತ' ಸಿನಿಮಾದಲ್ಲಿ ನಟಿಸಿದರು. ಚಿರಂಜೀವಿ ಜೊತೆ 'ಸ್ಟುವರ್ಟುಪುರಂ ಪೋಲೀಸ್ ಸ್ಟೇಶನ್', ಮಲಯಾಳಂನಲ್ಲಿ 'ಕಡಲ್', ಮಣಿರತ್ನಂರ 'ಬಾಂಬೆ', ಹಿಂದಿಯ 'ಬಾಗ್‌ಬಹದ್ದೂರ್' ಬುದ್ಧದೇವ ದಾಸಗುಪ್ತ ಅವರ ನಿರ್ದೇಶನದ ಚಿತ್ರಗಳಲ್ಲಿ ನಟಿಸಿದರು. ರಜನಿಕಾಂತ್ ಜೊತೆ ನಟಿಸಿದರು.

ಕನ್ನಡದಲ್ಲಿ ಸುಮಾರು ನೂರಕ್ಕೂ ಹೆಚ್ಚು ಚಿತ್ರಗಳಲ್ಲಿ ಅಭಿನಯಿಸಿರುವ ವಾಸುದೇವರಾವ್ ಸತ್ಯಜಿತ್ ರೇ ಯವರ ಪ್ರೀತಿಗೂ ಪಾತ್ರರಾಗಿದ್ದರು. ಹಿಂದಿಯ ತಾರೆಯರಾದ ದಿಲೀಪ್‌ಕುಮಾರ್, ಶಬಾನಾ ಆಜ್, ಸಂಜೀವ್‌ಕುಮಾರ್, ಶಶಿಕಪೂರ್ ಮೊದಲಾದವರಿಗೆ ಪರಿಚಿತರಾಗಿದ್ದರು. ಕನ್ನಡ, ತೆಲುಗು, ತಮಿಳು, ಹಿಂದೀ, ಮಲಯಾಳಂ ಭಾಷೆಗಳಲ್ಲಿ ನಟಿಸಿರುವ ಇವರಿಗೆ ಚಿತ್ರರಂಗ ನೆಮ್ಮದಿ

ನೀಡಿದೆ. ತನ್ನ ಅರ್ಧ ಶತಮಾನದ ಆಯುಷ್ಯವನ್ನು ರಂಗಭೂಮಿಯಲ್ಲೇ ತೇದ ಈ “ವ್ಯಕ್ತಿತ್ವಕ್ಕೆ ತನ್ನ ಇಳಿವಯಸ್ಸಿನಲ್ಲಿ ಬದುಕಿನ ವೈವಿಧ್ಯತೆ ರೂಪುಗೊಂಡಿತು.

ಇವರಿಗೆ ಮೂರು ಮಂದಿ ಮಕ್ಕಳು. ಎರಡು ಹೆಣ್ಣು, ಒಂದು ಗಂಡು. ಇವರ ರಂಗಭೂಮಿಯಲ್ಲಿನ ಸಂಪಾದನೆ ಹಾಗೂ ಮೀರಾಬಾಯಿಯವರ ಸಂಪಾದನೆಗಳಿಂದ ಈ ಮಕ್ಕಳಿಗೆ ವಿದ್ಯಾಭ್ಯಾಸ ಸಾಗುತ್ತಿತ್ತು. ತಂದೆ ಒಬ್ಬ ಕಲಾವಿದನಾಗಿ ಖ್ಯಾತಿ ಪಡೆದದ್ದು ಈ ಮಕ್ಕಳಲ್ಲಿ ಕಲೆಯ ಸೆಳೆತ ಉಂಟಾಗುವಂತೇನೂ ಮಾಡಲಿಲ್ಲ. ವಿದ್ಯಾಭ್ಯಾಸದತ್ತ ಹೆಚ್ಚಿನ ಗಮನಕೊಟ್ಟಿದ್ದರು.

ಈ ವಾಸುದೇವರಾವ್‌ರ ಹಿರಿಯ ಮಗಳು ಸುಜಾತ. ಈಕೆ ಕಾರವಾರದಲ್ಲಿ ನೆಲೆಸಿದ್ದಾಳೆ. ಈಕೆಯ ಗಂಡ ವಾಸುದೇವಮೂರ್ತಿ. ಈತ ಓರ್ವ ಇಂಜಿನಿಯರ್.

ಮಗ ಸುಧೀಂದ್ರ. ಈತ ವಿಜ್ಞಾನದಲ್ಲಿ ಪದವಿ ಗಳಿಸಿ ಸಿಂಗಾಪೂರ್‌ನಲ್ಲಿ ಉದ್ಯೋಗದಲ್ಲಿದ್ದಾನೆ.

ವಾಸುದೇವರಾವ್‌ರ ಮೂರನೆಯ ಮಗಳು ಸುಧಾ. ಈಕೆಯ ಪತಿ ಜಗದೀಶ್, ಈತ ವಿದ್ಯುಚ್ಛಕ್ತಿ ವಿಭಾಗದಲ್ಲಿ ಕೆಲಸ ಮಾಡುತ್ತಿದ್ದಾರೆ.

ಹೀಗೆ ವಾಸುದೇವರಾವ್‌ರ ಮೂವರು ಮಕ್ಕಳೂ ತಂದೆಯ ಕಲಾಶ್ರಮದಿಂದ ಬದುಕನ್ನು ರೂಪಿಸಿಕೊಂಡಂಥವರೇ. ಮಕ್ಕಳ ಮದುವೆ ಮಾಡಲು ಇವರಿಗೇನೂ ತೊಡಕಾಗಲಿಲ್ಲ. ಅಂದರೆ ಹಣಕಾಸಿನ ತೊಂದರೆ ಆಗಲಿಲ್ಲ. ಏಕೆಂದರೆ ಇವರಿಗೆ ಸಿನಿಮಾ ಮಾಧ್ಯಮದಿಂದ ಬಂದ ಹಣವನ್ನು ಅನಗತ್ಯವಾಗಿ ಖರ್ಚು ಮಾಡದೆ ಕೂಡಿಡುವ ಗುಣವಿತ್ತು.

ವಾಸುದೇವರಾವ್ ಯಾವತ್ತಿಗೂ ಮಕ್ಕಳ ಮೇಲೆ ತಮ್ಮ ಅಭಿರುಚಿಗಳನ್ನು ಹೇರಲೇ ಇಲ್ಲ. ಅವರಿಗೂ ಓದುವತ್ತಲೇ ಹೆಚ್ಚಿನ ಆಸಕ್ತಿಯಿತ್ತು. ಚಿಕ್ಕಮಗಳಿಗೆ ಕ್ರೀಡೆಯಲ್ಲಿ ಒಲವಿತ್ತು. ಹೀಗೇ ಒಬ್ಬೊಬ್ಬರು ಒಂದೊಂದು ರಂಗದಲ್ಲಿ ಬೆಳೆದರು.

ವಾಸುದೇವರಾವ್‌ಗೆ ಸದಾ ಕಾಡುವ ಸ್ಮೃತಿಯಲ್ಲಿ ಅವರ ತಂದೆಯವರು ಮುಖ್ಯರಾಗಿದ್ದಾರೆ. ಏಕೆಂದರೆ ತಂದೆಗಿದ್ದ ಆಧ್ಯಾತ್ಮಿಕ ಅನುರಾಗ ಇವರಲ್ಲಿ ಆಶ್ಚರ್ಯವನ್ನುಂಟುಮಾಡಿತ್ತು. ಒಮ್ಮೆ ಇವರ ತಂದೆಗೆ ತೀವ್ರವಾದ ಕಾಯಿಲೆ ಬಂತು. ಆಗ ವಿಜಯದಶಮಿಯ ಕಾಲ. ಇವರ ಮನೆಯಲ್ಲಿ ಸರಸ್ವತಿ ಪೂಜೆ ನಡೆಯುತ್ತಿತ್ತು. ಆಗಲೇ ಕಾಯಿಲೆಯಲ್ಲಿ ನರಳುತ್ತಿದ್ದ ಇವರ ತಂದೆ ಪೂಜೆ ಮಾಡುತ್ತಿದ್ದವರಿಗೆ ನಿಧಾನವಾಗಿ ಹೇಳಿದರು, ನೀವು ಗಾಬರಿಯಾಗಬೇಡಿ. ಪೂಜೆ ನಿಲ್ಲಿಸಬೇಡಿ, ಪ್ರಸಾದ ಸ್ವೀಕರಿಸಿ ನಾನು ಹೋಗುತ್ತೇನೆ.

ಕೊನೆಗೂ ಪ್ರಸಾದ ಸ್ವೀಕರಿಸಿ ತೀರಿಕೊಂಡರು. ಇಂಥ ಘಟನೆಗಳು ವಾಸುದೇವರಾವ್‌ರಲ್ಲಿ ತನ್ನ ತಂದೆಯೊಬ್ಬ ಇಚ್ಛಾಮರಣಿ ಎಂಬ ಭಾವುಕ ನಂಬಿಕೆ ಗಟ್ಟಿಗೊಳ್ಳಲು ಕಾರಣವಾದವು.

ವಾಸುದೇವರಾವ್ ಕಂಪನಿಯಲ್ಲಿ ಶ್ರಮಿಸುತ್ತಿದ್ದಾಗ ಇವರೊಡನೆ ಅಭಿನಯಿಸುತ್ತಿದ್ದ ಹಲವಾರು ಹಿರಿ ಕಿರಿಯ ಕಲಾವಿದರಿದ್ದರೆಂಬುದನ್ನು ನಾವು ಈಗಾಗಲೇ ಕೇಳಿದ್ದೇವೆ. ಆದರೆ ಇವರ ಜೊತೆ ಕನ್ನಡದ ಪ್ರತಿಭಾನ್ವಿತ ನಟ ನರಸಿಂಹರಾಜು, ಬಾಲಕೃಷ್ಣ, ಈಶ್ವರಯ್ಯ, ಜಿ.ವಿ. ಅಯ್ಯರ್, ಪಾಪಮ್ಮ, ಬಿ. ವಿ. ಪಂತುಲು ಅವರೂ ಇದ್ದರು.

ನರಸಿಂಹರಾಜು ವೀರಣ್ಣನವರು ಅಭಿನಯಿಸುತ್ತಿದ್ದ ಪಾತ್ರಗಳನ್ನು ಮಾಡುತ್ತಿದ್ದರು. ವಾಸುದೇವರಾವ್ ನರಸಿಂಹರಾಜುಗೆ ಮೀಸೆ ಅಂಟಿಸುತ್ತಿದ್ದುದೂ ಉಂಟು.

೧೯೭೯ ರ ಸಮಯ. ವಾಸುದೇವರಾವ್ ಬಾಡಿಗೆ ಮನೆಯೊಂದರಲ್ಲಿ ವಾಸಿಸುತ್ತಿದ್ದರು. ಈ ವೇಳೆಗೆ 'ಚೋಮನ ದುಡಿ' ಯಶಸ್ವಿಯಾಗಿತ್ತು. ಇದರಿಂದ ಇವರಿಗೆ ಪ್ರಶಸ್ತಿಯೂ ಲಭಿಸಿತ್ತು. ಮೂವತ್ತೈದು ರೂಪಾಯಿ ಬಾಡಿಗೆ ಮನೆ, ತೀರಾ ಚಿಕ್ಕದಾಗಿತ್ತು. ಮಕ್ಕಳು ಮರಿಗೆ ಕಷ್ಟವಾಗುತ್ತಿತ್ತು. ಹೀಗಿರುವಾಗ ಎಸ್. ಎಲ್. ಭೈರಪ್ಪನವರ 'ದಾಟು' ಕಾದಂಬರಿಯನ್ನು ಸಿನಿಮಾ ಮಾಡಬೇಕೆಂದು ಸೋಮಣ್ಣ ಎಂಬುವವರು ನಿರ್ಧರಿಸಿದ್ದರು. ಈ ಚಿತ್ರಕ್ಕೆ ವಾಸುದೇವರಾವ್‌ರನ್ನು ಗೊತ್ತುಮಾಡಲು ಇವರ ಮನೆ ಬಳಿ ಹುಡುಕಿಕೊಂಡು ಬಂದರು. ಒಬ್ಬ ರಾಷ್ಟ್ರ ಪ್ರಶಸ್ತಿ ವಿಜೇತ ಕಲಾವಿದನ ಬೇಗೆಯ ಬದುಕನ್ನು ಅರಿತ ಸೋಮಣ್ಣ, ಇವರಿಗೊಂದು ವಾಸಕ್ಕೆ ಸ್ಥಳ ಕೊಡಿಸಲು ತೀರ್ಮಾನಿಸಿದರು. ಬಿ. ಡಿ. ಎ. ಗೆ ಅರ್ಜಿ ಹಾಕಿಸಿದರು. ಒಂದು ಸ್ಥಳವನ್ನೂ ಮಂಜೂರು ಮಾಡಿಸಿದರು.

ಇವರಿಗೆ ಎಲ್ಲಿಲ್ಲದ ಸಡಗರವಾಯ್ತು. ಜಯನಗರ ಒಂಬತ್ತನೇ ಬ್ಲಾಕಿನ ಪೂರ್ವದಲ್ಲಿ ಇವರಿಗೆ ನಿವೇಶನ ಅತಿ ಕಡಿಮೆ ದರದಲ್ಲಿ ಲಭ್ಯವಾಯಿತು. ತಾವು ಕಷ್ಟಪಟ್ಟು ಕೂಡಿಟ್ಟಿದ್ದ ಹಣದಲ್ಲಿ ಆ ಸ್ಥಳದಲ್ಲಿ ಮನೆ ಕಟ್ಟಿದರು. ಸ್ವಂತ ನೆಲೆಯಿಲ್ಲದೆ ಒದ್ದಾಡುತ್ತಿದ್ದ ಈ ಕಲಾಜೀವಿಗೊಂದು ಖಾಯಂ ವಿಳಾಸ ರೂಪುಗೊಂಡಿತು.

ನಂ. ೫೫೭, ಒಂಬತ್ತನೇ ಬ್ಲಾಕ್, ಈಸ್ಟ್ ಎಂಡ್, ಮುಖ್ಯ ರಸ್ತೆ, ಜಯನಗರ, ಬೆಂಗಳೂರು - ೬೯. ಇದು ವಾಸುದೇವರಾವ್ ಅವರ ಸ್ವಂತ ಮನೆಯ ವಿಳಾಸ.

ಇವರ ಮನೆಯ ಮುಂದೆ ಹೂವಿನ ಗಿಡವಿದೆ. ಬಿಳಿಯ ಹೂಬಿಟ್ಟು ಮೌನವಾಗಿದೆ. ಈ ಹೂಗಳು ವಾಸುದೇವರಾವ್ ಮತ್ತು ಅವರ ಪತ್ನಿ ಮೀರಾಬಾಯಿಯ ಹಾಲಿನಂಥ ವ್ಯಕ್ತಿತ್ವಕ್ಕೆ ಕನ್ನಡಿ ಹಿಡಿದಂತೆ ನಳನಳಿಸುತ್ತಿರುತ್ತವೆ.

ಮೀರಾಬಾಯಿಗೂ ವಯಸ್ಸಾಗಿದೆ. ತಿರುಗಾಡಲು ಊರುಗೋಲಿನಾಸರೆ ಬೇಕು. ಆದರೆ ಅವರ ಮನಸ್ಸಿಗೊಂದು ಮೊನಚಿದೆ. ಮಾತಿಗೆ ಸೂಕ್ಷ್ಮತೆಯಿದೆ. ಸದಾ ತನ್ನ ಮನೆ ಮತ್ತು ಗಂಡನ ಬಗ್ಗೆ ನಿಗಾ ವಹಿಸುವ ಉತ್ಸಾಹವಿದೆ.

ಮೀರಾಬಾಯಿ ತಾನು ಸರ್ಕಾರಿ ಕೆಲಸದಲ್ಲಿದ್ದುದರಿಂದ ಒಬ್ಬ ಕಲಾವಿದ ನನ್ನು ಮದುವೆಯಾದನೆಂದು ವ್ಯಥೆ ಪಟ್ಟವರಲ್ಲ. ಈಗಲೂ, ಅವರ ಮುದಿಕಣ್ಣಲ್ಲಿ ಪ್ರೀತಿಯ ಹರೆಯವಿದೆ. ಅವರು ಹೇಳುತ್ತಾರೆ; 'ನನ್ನ ಗಂಡ ಸ್ವಲ್ಪ ಓದಿದ್ರೆ, ನಾಟಕ ಬಿಟ್ ಬನ್ನಿ ಎನ್ನಬಹುದಿತ್ತು. ಅವರಿಗಿದ್ದ ಏಕೈಕ ಸಂಪತ್ತು ರಂಗಭೂಮಿಯೇ ಆಗಿದ್ದುದರಿಂದ ನಾವು ಅವರ ಕಾಯಕವನ್ನು ಗೌರವಿಸಿದೆವು' ಎಂದು.

ಈ ತಾಯಿ ಹೇಳುವಂತೆ, ವಾಸುದೇವರಾವ್‌ಗೆ ತಕ್ಕಷ್ಟು ಹಣ ಸಿಕ್ಕಿಲ್ಲ. ನಾಟಕ ಕಂಪನೀಲಿ ಸಂಬಳ ತೀರಾ ಕಡಿಮೆಯಿತ್ತು. ಈಗಲೂ ಚಲನಚಿತ್ರಗಳಲ್ಲಿ ಕೊಡುವ ಸಂಭಾವನೆಯೂ ಕಡಿಮೆ. ಇಷ್ಟಾದರೂ ಇವರಿಗೆ ನೆಮ್ಮದಿಯಿದೆ.

ವಾಸುದೇವರಾವ್ ಮುಪ್ಪಿನ ಕವಚ ತೊಟ್ಟಿದ್ದಾರೆ. ಆದರೆ ಈಗಲೂ ಅವರ ಮುಖದಲ್ಲಿ ಕಳೆಯಿದೆ. ಕಲೆಯನ್ನು ಮತ್ತಷ್ಟು ಕಲಿಯಬೇಕೆಂಬ ವಿನಯವಿದೆ. ತನ್ನ ವೃತ್ತಿಯ ಬಗ್ಗೆ ಭಕ್ತಿಯಿದೆ.

ಸರ್ಕಾರದಿಂದ ತಿಂಗಳಿಗೆ ೫೦೦ ರೂಪಾಯಿ ಸಹಾಯಧನ ಬಂದು ತಲುಪುತ್ತದೆ. ಅಲ್ಲದೆ ದೆಹಲಿಯಿಂದ ಹಿರಿಯ ಕಲಾವಿದರಿಗೆ ಸಿಗುವ ೭೫೦ ರೂ. ಸಹಾಯಧನ ಪ್ರತಿ ತಿಂಗಳೂ ತಲುಪುತ್ತದೆ. ಇಷ್ಟೇ ಅಲ್ಲದೆ ಆಗಾಗ ಕೆಲವು ಚಲನಚಿತ್ರ, ಧಾರಾವಾಹಿಗಳಲ್ಲಿ ಅವಕಾಶ ದೊರೆಯುತ್ತದೆ. ಇವೆಲ್ಲವುಗಳಿಂದ ದೊರೆಯುವ ಹಣ ಮತ್ತು ಮೀರಾಬಾಯಿಯವರಿಗೆ ಬರುವ ಪೆನ್‌ಶನ್ ಹಣ ಜೀವನ ನಡೆಸಲು ಅನುಕೂಲಕರವಾಗಿದೆ.

ಈಗ ವಾಸುದೇವರಾವ್‌ಗೆ ನೆನಪಿರುವುದು ಕೆಲವೇ ಚಿತ್ರಗಳ ಹೆಸರು. ಅವುಗಳಲ್ಲಿ-

ಚೋಮನ ದುಡಿ, ಕಪ್ಪುಕೊಳ, ಅಪರಿಚಿತ, ಪಯಣಿಗ, ಮುತ್ತು ಒಂದು ಮುತ್ತು, ಕ್ರಾಂತಿಯೋಗಿ ಬಸವಣ್ಣ, ಮೈತ್ರಿ, ಆತ್ಮಶಕ್ತಿ, ಕಳಸಾಪುರದ ಹುಡುಗರು,

ದಂಗೆಯೆದ್ದ ಮಕ್ಕಳು, ದೊಂಬರಕೃಷ್ಣ, ಅಪರಂಜಿ, ಪ್ರೇಮಜ್ವಾಲೆ, ಡಿಸೆಂಬರ್ ೩೧, ಕಾಡಿಗೆ ಹೋದವರು, ದೊರೆ, ಪಲ್ಲವಿ ಅನುಪಲ್ಲವಿ, ಪ್ರಜೆಗಳು ಪ್ರಭುಗಳು, ಬೇಟೆಗಾರ, ಶ್ರಾವಣಸಂಜೆ, ಮೊಮ್ಮಗ, ವ್ಯೂಹ, ಮೆಚ್ಚಿದ ಮದುಮಗ, ಊರ್ವಶಿ, ತುಳಸಿದಳ, ಗಪ್‌ಚುಪ್, ಪ್ರವಾಹ, ಒಂದಾಗಿ ಬಾಳು, ಕಲಿಯುಗ, ಬಾಳಚದುರಂಗ, ಪ್ರೇಮರಾಗ ಹಾಡು ಗೆಳತಿ, ಭೂಮಿತಾಯಿಯ ಚೊಚ್ಚಿಲಮಗ, ಮಾನಿನಿ, ಕನಕ ಮುಂತಾದ ನೂರಕ್ಕೂ ಹೆಚ್ಚು ಚಿತ್ರಗಳು, ಇಷ್ಟೊಂದು ಚಲನಚಿತ್ರಗಳಲ್ಲಿ ನಟಿಸಿದ ವಾಸುದೇವರಾವ್, ಕಿರುಚಿತ್ರಗಳಲ್ಲೂ ಅಭಿನಯಿಸಿದ್ದಾರೆ.

ತಿರುಗುಬಾಣ, ಮನೆ, ನೀತಿಚಕ್ರ, ಜೀವನ, ಮಹಾಯಜ್ಞ ಮೊದಲಾದವು ಮುಖ್ಯ ಧಾರಾವಾಹಿಗಳು. ಇವರ ಅಭಿನಯದ ಟೆಲಿಫಿಲಂಗಳೆಂದರೆ - ಗಾಯತ್ರಿ, ಗಂಗವ್ವ ಇತ್ಯಾದಿ.

ವಾಸುದೇವರಾವ್‌ರ ಮನೆ ದೇವರು ವೆಂಕಟರಮಣಸ್ವಾಮಿ, ಇಷ್ಟದೇವರು ದುರ್ಗಾಪರಮೇಶ್ವರಿ ಮತ್ತು ರಾಘವೇಂದ್ರಸ್ವಾಮಿ,

ಬಿಡುವಿನ ವೇಳೆಯಲ್ಲಿ ಇವರು ಟಿ.ವಿ. ನೋಡುವ ಹಾಗೂ ದಿನಪತ್ರಿಕೆ ಓದುವ ಹವ್ಯಾಸ ಹೊಂದಿದ್ದಾರೆ. ರಾಜಕೀಯ ವರದಿಗಳೆಂದರೆ ಇವರಿಗೆ ಇಷ್ಟ.

## ವಾಸುದೇವರಾವ್ ಜೊತೆ ಕೆಲವು ಮಾತುಗಳು

ಎಂಭತ್ತೊಂದು ವರ್ಷದ ವಾಸುದೇವರಾವ್ ಜೊತೆ ಕೆಲವು ಮಾತು ಆಡಬೇಕೆಂದು ಅವರ ಮನೆಗೆ ಕಾಲಿಟ್ಟರೆ ಏನೋ ಒಂದು ಗಂಭೀರ ವಾತಾವರಣದ ಅನುಭವವಾಗುತ್ತದೆ. ಬಿಳಿಯ ಉಡುಪು, ಬಿಳಿಯ ತಲೆಗೂದಲು, ಕುರಚಲು ಬಿಳಿಗಡ್ಡ, ಮುಖದಲ್ಲಿ ತಣ್ಣನೆಯ ನಗು. ಅವರು ಮಾತಿಗೆ ಅನಗತ್ಯವಾಗಿ ಇಳಿಯಲಾರರು. ನಾವು ಕೇಳಿದ್ದಕ್ಕಷ್ಟೇ ಪ್ರತಿಕ್ರಿಯಿಸಲು ತೊಡಗುತ್ತಾರೆ. ಹೀಗೇ ಮಾತನಾಡುತ್ತ ಆಡುತ್ತ ಅವರೊಳಗಿನ ಕಲೆಯ ನೆನಪು ಮೋಡವಾಗಿ ಮಳೆಗರೆಯುತ್ತದೆ. ಅದೊಂದು ನಿಲ್ಲದ ಮಳೆಯಾಗಿ ನಮ್ಮನ್ನು ತಣಿಸುತ್ತದೆ. ಎಂಥ ಅನುಭವದ ಜೀವ ಅದು ! ನಾನು ಕೇಳಿದೆ :

* ರಂಗಭೂಮಿ ಮತ್ತು ಸಿನಿಮಾ ಇವುಗಳ ಬಗ್ಗೆ ನಿಮ್ಮ ಅಭಿಪ್ರಾಯವೇನು ?

ವಾಸುದೇವರಾವ್ : ರಂಗಭೂಮಿಗೆ ಒಂದು ವಿಶಿಷ್ಟವಾದ ಚೈತನ್ಯವಿದೆ. ಇಲ್ಲಿ ಮನುಷ್ಯನಿಗೆ ಪ್ರಾಮುಖ್ಯತೆಯಿರುತ್ತದೆ. ಅವನಿಗೆ ತಕ್ಷಣ ಪ್ರತಿಕ್ರಿಯೆ

ಲಭಿಸುತ್ತದೆ. ನಟನಿಗೆ ಸಂಪೂರ್ಣವಾದ ಅಭಿವ್ಯಕ್ತಿ ಸ್ವಾತಂತ್ರ್ಯ ರಂಗಭೂಮಿಯಲ್ಲಿ ಸಾಧ್ಯ. ಅಲ್ಲದೇ ಒಂದೇ ಪಾತ್ರ ಪ್ರದರ್ಶನದಿಂದ ಪ್ರದರ್ಶನಕ್ಕೆ ಬೆಳವಣಿಗೆ ಹೊಂದಲು ಇಲ್ಲಿ ಸಾಧ್ಯ.

ಆದರೆ ಸಿನಿಮಾದಲ್ಲಿ ಮನುಷ್ಯನಿಗಿಂತ ತಂತ್ರಜ್ಞಾನದ ಕೆಲಸ ಹೆಚ್ಚಾಗಿರುತ್ತದೆ. ನಟನಿಗೆ ಯಾವಾಗಲೂ ಪ್ರತಿಕ್ರಿಯೆ ಲಭಿಸುತ್ತದೆ. ಅಲ್ಲದೆ ನಟನಿಗೆ ಸಂಪೂರ್ಣ ಸ್ವಾತಂತ್ರ್ಯ ಸಿಗುವುದಿಲ್ಲ. ನಿರ್ದೇಶಕ, ಛಾಯಾಗ್ರಾಹಕ ಮುಂತಾದವರು ಬಗ್ಗಿಸಿದಂತೆ ಬಗ್ಗ ಬೇಕಾಗುತ್ತದೆ. ಕ್ಯಾಮರಾಕ್ಕೆ ಸರಿಯಾಗದಿದ್ದರೆ ಮತ್ತೆ ಮತ್ತೆ ಶೂಟ್ ಮಾಡುತ್ತಾರೆ. ಒಮ್ಮೆ ಬಂದ ನಟನೆಯ ತೀವ್ರತೆ ಮತ್ತೆ ಮತ್ತೆ ಚಿತ್ರೀಕರಿಸಿದಾಗ ಕೃತಕವಾಗಬಹುದು. ಸಿನಿಮಾದಲ್ಲಿ ಒಮ್ಮೆ ಒಂದು ಪಾತ್ರ ಚಿತ್ರೀಕರಣಗೊಂಡರೆ ಮುಗೀತು. ಆ ಪಾತ್ರ ಮತ್ತೆ ಬೆಳವಣಿಗೆ ಹೊಂದುವ ಸಾಧ್ಯತೆಯೇ ಇಲ್ಲ.

ಇಷ್ಟಾದರೂ ಸಿನಿಮಾದಲ್ಲಿ ಕೆಲವು ಅನುಕೂಲಗಳಿವೆ. ನಟನ ಅಭಿನಯವನ್ನು ಪರಿಣಾಮಕಾರಿಯಾಗಿಸಲು ವಿವಿಧ ತಂತ್ರಜ್ಞಾನವನ್ನು ಬಳಸುತ್ತಾರೆ. ಈ ರೀತಿಯ ತಾಂತ್ರಿಕ ಸಾಧ್ಯತೆ ಜನರನ್ನು ಹೆಚ್ಚು ಆಕರ್ಷಿಸುವಲ್ಲಿ ಯಶಸ್ವಿಯಾಗುತ್ತದೆ. ರಂಗಭೂಮಿ ಕಾಲಕ್ಕೆ ತಕ್ಕಂತೆ ಪರಿವರ್ತನೆಯಾಗಬೇಕಾಗಿದೆ.

ಈಗ ರಂಗಭೂಮಿಗಿಂತ ಟಿ. ವಿ. ಚಾನಲ್ ಕಡೆ ಜನ ಆಕರ್ಷಿತರಾಗುತ್ತಿದ್ದಾರೆ. ಮನರಂಜನೆ ವಿಭಿನ್ನ ನೆಲೆಗಳಲ್ಲಿ ದೊರೆಯುತ್ತಿದೆ. ಜನ ಮನರಂಜನೆಯನ್ನು ಬಯಸುತ್ತಿದ್ದಾರೆಯೇ ಹೊರತು ಚಿಂತನೆ ನಡೆಸುವುದನ್ನಲ್ಲ. ರಂಗಭೂಮಿ ಮತ್ತಷ್ಟು ರೂಪುಗೊಳ್ಳಬೇಕಿದೆ.

* ಈಗ ಬರುತ್ತಿರುವ ಚಲನಚಿತ್ರಗಳ ಬಗ್ಗೆ ನಿಮ್ಮ ಅನಿಸಿಕೆ ಏನು ?

ವಾಸುದೇವರಾವ್ : ಈಗ ಚಿತ್ರ ಮಾಡುವಂಥವರಿಗೆ ಬದುಕಿಗಿಂತ ಹಣ ಗಳಿಕೆಯೇ ಪ್ರಧಾನವಾದಂತಿದೆ. ಜನ, ಸಮಾಜ ಇತ್ಯಾದಿಗಳಿಗಿಂತ ನಾನು ಹಾಕಿದ ಹಣ ಮರಿ ಹಾಕೀತೇ ಎಂಬ ಕಾತರ ಹೆಚ್ಚಾಗುತ್ತಿದೆ. ಅದಕ್ಕೆ ತಕ್ಕ ಮಸಾಲೆ ಸೇರಿಸುವವರೇ ಹೆಚ್ಚು. ಸಾತ್ವಿಕವಾದ ರಕ್ತಶಾಲಿ ದೃಶ್ಯಗಳಿಗಿಂತ ಅತಿರೇಕದ, ಅಪಕ್ವ ಸೀನುಗಳು ಅಧಿಕವಾಗುತ್ತಿವೆ.

ಚಿತ್ರಗಳು ಆದಷ್ಟು ಸ್ವಾಭಾವಿಕವಾಗಿರಬೇಕು. ನಮ್ಮ ಬದುಕೇ ಸಿನಿಮಾದಲ್ಲಿ ಕಾಣಿಸಬೇಕೇ ಹೊರತು, ನಮಗೂ ಸಿನಿಮಾಕ್ಕೂ ಯಾವ ಸಂಬಂಧವೂ ಇಲ್ಲ ಎನಿಸಬಾರದು.

ಚಿತ್ರ ಮಾಡುವಾಗ, ಮನುಷ್ಯರಿಗೆ ಹತ್ತಿರವಾದ ಕಥೆಗಳನ್ನು ಆಯ್ಕೆ ಮಾಡಿಕೊಳ್ಳಬೇಕು. ಕುವೆಂಪು, ಕಾರಂತ ಮುಂತಾದ ಸಾಹಿತಿಗಳು ಹೇಗೆ ಶ್ರದ್ಧೆಯಿಂದ ಕ್ರಿಯಾಶೀಲತೆಯಿಂದ ಸಮಾಜವನ್ನು ಗ್ರಹಿಸಿ ಕಾದಂಬರಿಗಳನ್ನು ರೂಪಿಸುತ್ತಿದ್ದರೂ ಹಾಗೆಯೇ ಓರ್ವ ಚಲನಚಿತ್ರ ಮಾಡುವವನೂ ಇರಬೇಕಾಗುತ್ತದೆ. ವರ್ತಮಾನದ ಅಥವಾ ಮನುಷ್ಯರ ಸಂಕೀರ್ಣತೆಗಳನ್ನು ಶೋಧಿಸಿ ಕಲೆಯಾಗಿಸುವ ಎದೆಗಾರಿಕೆ ಬೇಕಾಗುತ್ತದೆ. ಮನಸ್ಸಿಗೆ ಬಂದ ಕತೆ, ಹಾಡು, ಸಂಭಾಷಣೆ, ಕುಣಿತಗಳೆಲ್ಲ ಬದುಕಾಗುವುದಿಲ್ಲ. ಸಿನಿಮಾವೂ ಆಗುವುದಿಲ್ಲ.

ಚಿತ್ರ ಮಾಡುವಾಗ ಅದರಲ್ಲೂ ಒಂದು ಕಾಲದ ಜೊತೆ ಸ್ಪರ್ಧಿಸುವ, ಸ್ಪಂದಿಸುವ ಚಿತ್ರ ಮಾಡುವಾಗ ಯಾವುದೇ ಅಸಹ್ಯ ರಾಜಕೀಯಗಳಿರಬಾರದು. ಕಲಾವಿದರನ್ನು ಆಯ್ಕೆ ಮಾಡುವಾಗ ಪಕ್ಷಪಾತವಿರಬಾರದು. ಒಂದು ಒಳ್ಳೆಯ ಕಥೆಯಲ್ಲಿ ಬರುವ ಪಾತ್ರಕ್ಕೆ ಸರಿಯಾಗಿ ಜೀವ ಕೊಡುವಂಥವರನ್ನು ಆರಿಸಬೇಕು.

ಒಬ್ಬ ವ್ಯಕ್ತಿ ಎಲ್ಲಾ ಸಂವೇದನೆಯ ಪಾತ್ರಗಳನ್ನು ಮಾಡುವುದು ತೀರಾ ಕಠಿಣ ಕೆಲಸ. ಹಾಗೆ ಒಂದೊಂದು ಪಾತ್ರಕ್ಕೆ ಸರಿಹೊಂದುವ ಕಲಾವಿದರನ್ನು ಶೋಧಿಸಬೇಕು. ಕಣಗಾಲ್ ಪುಟ್ಟಣ್ಣನವರಿಗೆ ಇಂಥ ಕ್ರಿಯಾಶೀಲತೆ ಇತ್ತು.

ಹಣ, ಬೆಂಬಲ ಇತ್ಯಾದಿ ಇರುವ ಅನೇಕರು ಕಲೆಯ ಮಾಂತ್ರಿಕತೆ ತಿಳಿಯದೆ ನಟ, ನಿರ್ದೇಶಕ, ಸಂಗೀತ, ಸಾಹಿತ್ಯ, ಸಂಭಾಷಣೆ ಇತ್ಯಾದಿ ಎಲ್ಲ ಕ್ಷೇತ್ರದಲ್ಲೂ ಒಬ್ಬರೇ ದುಡಿಯುವ ಹಟ ಮಾಡುತ್ತಾರೆ. ಇಂಥ ಚಟುವಟಿಕೆಗಳಿಂದ ಉತ್ತಮ ಸಿನಿಮಾ ನಿರ್ಮಾಣ ಕಷ್ಟವಾಗುತ್ತದೆ.

ಈಗಲೂ ಒಳ್ಳೊಳ್ಳೆಯ ಸಿನಿಮಾಗಳು ಬರುತ್ತಿವೆ. ಉತ್ತಮ ನಟರೂ ಬರುತ್ತಿದ್ದಾರೆ. ಹೊಸ ಪ್ರತಿಭೆಗಳು ಕಾಣಿಸುತ್ತಿವೆ. ಪರವಾಗಿಲ್ಲ.

* ನೀವು ಮೆಚ್ಚುವ ಸಿನಿಮಾ, ನಾಟಕ, ನಟ, ನಿರ್ದೇಶಕ ಇತ್ಯಾದಿಗಳ ಬಗ್ಗೆ ಸ್ವಲ್ಪ ಹೇಳಿ,

ವಾಸುದೇವರಾವ್ : ನನಗೆ ಏನು ಹೇಳಬೇಕೋ ಗೊತ್ತಾಗುತ್ತಿಲ್ಲ. ಸಿನಿಮಾದಲ್ಲಿ ರಾಜಕಪೂರ್ ಇಷ್ಟವಾಗುವ ನಟ ಸತ್ಯಜಿತ್ ರೇ, ಶಾಂತಾರಾಮ್, ಮಣಿರತ್ನಂ, ಮೃಣಾಲ್ ಸೇನ್ ಮೊದಲಾದವರ ಸಿನಿಮಾಗಳೆಂದರೆ ನನಗೆ ಆಸಕ್ತಿ.

ಕನ್ನಡದ ಬಾಲಕೃಷ್ಣ ಅವರು ಒಳ್ಳೆ ನಟರಾಗಿದ್ರು. ಎಂಥಾ ಪಾತ್ರಗಳೇ ಆಗಲಿ ಅವುಗಳನ್ನು ಜೀವಂತವಾಗಿ ಮಾಡುತ್ತಿದ್ರು.

ನಮಗೆ ಒಳ್ಳೆಯ ನಟ, ಕಲಾವಿದರೇ ನಿರ್ದೇಶಕರೆನಿಸುತ್ತಿದ್ದರು. ಸುಬ್ಬಯ್ಯ ನಾಯ್ಡು, ಗುರುಮೂರ್ತಪ್ಪ, ನಾಗೇಶರಾವ್ ಇತ್ಯಾದಿ. ಪಾತ್ರ ಮಾಡುತ್ತಿದ್ದವರೇ ನಮ್ಮಂಥವರಿಗೊಂದು ಶಿಕ್ಷಣ ನೀಡುತ್ತಿದ್ದರು. ರಾಜಕುಮಾರ್ ಒಳ್ಳೆ ನಟ, ಕಷ್ಟ ಪಟ್ಟು ಮುಂದೆ ಬಂದಿದ್ದಾರೆ. ಅವರಿಗೆ ತಗ್ಗಿ ನಡೆಯುವ ಅಂತಃಕರಣವಿದೆ. ಒಳ್ಳೆ ಗುಣ ಅಪಾರವಾಗಿದೆ.

* ನಿಮಗೆ ಸದಾ ಕಾಡುವ ನಿಮ್ಮ ಅಭಿನಯದ ನೆನಪುಗಳೇನಾದರೂ ಇವೆಯೇ?

ವಾಸುದೇವರಾವ್ : ಎಲ್ಲಾ ಮರೆವು, ಗೊತ್ತಾಗುತ್ತಿಲ್ಲ. ಆದರೂ 'ಚೋಮನ ದುಡಿ'ಯಲ್ಲಿನ ಅಭಿನಯ, ಕ್ರಾಂತಿಯೋಗಿ ಬಸವಣ್ಣ ಚಿತ್ರದಲ್ಲಿ ಚಪ್ಪಲಿಮಾಡುವ ದೃಶ್ಯ, ಡಿಸೆಂಬರ್ ೩೧ ಚಿತ್ರದಲ್ಲಿ ಚಾಟಿ ಹೊಡೆದುಕೊಳ್ಳುವ ದೃಶ್ಯಗಳು ನನಗೆ ಚೆನ್ನಾಗಿ ನೆನಪಿವೆ. ನಾನು ಚಾಟಿ ಹೊಡೆದುಕೊಳ್ಳುತ್ತಿದ್ದಾಗ ಮೈಮರೆತಿದ್ದೆ. ಆ ಪಾತ್ರದಲ್ಲಿ ತಲ್ಲೀನನಾಗಿದ್ದೆ. ನನ್ನನ್ನು ನೋಡಿ ಕ್ಯಾಮರಾಮನ್ ಸಾಕು, ಸಾಕು ಎಂದು ಕಿರುಚಿಕೊಂಡರೂ ಗೊತ್ತಾಗಿರಲಿಲ್ಲ.

ನನಗೆ ಎಂಥ ಪಾತ್ರವೇ ಸಿಗಲಿ, ಅವುಗಳನ್ನು ತೀವ್ರವಾಗಿ ಅನುಭವಿಸುತ್ತ ಅಭಿನಯಿಸಲು ಇಷ್ಟ, ಸಹಜವಾಗಿ ನಟಿಸುವುದರಲ್ಲೇ ನನಗೆ ಖುಶಿ.

*** ಹೊಸತಾಗಿ ಬರುವ ಕಲಾವಿದರಿಗೆ ನೀವೇನಾದರೂ ಹೇಳಲು ಬಯಸುತ್ತೀರಾ ?**

ವಾಸುದೇವರಾವ್ : ಕಲಾವಿದರಲ್ಲಿ ಹೊಸಬರು, ಹಳಬರು ಎಂದು ಹೇಳುವುದು ಕಷ್ಟ. ಏಕೆಂದರೆ ಕಲೆಯನ್ನು ಪ್ರತಿಯೊಬ್ಬರೂ ಹೊಸಬರಂತೆಯೇ ಕಲಿಯಬೇಕು.

ಹಿಂದೆ ಕಲಾವಿದರು ಒಂದು ಪಾತ್ರವನ್ನು ಅಭಿನಯಿಸುವಾಗ ಅಗಾಧವಾದ ಶ್ರದ್ಧೆಯಿಟ್ಟುಕೊಂಡಿರುತ್ತಿದ್ದರು. ಒಬ್ಬ ಸಂಗೀತಗಾರನಾಗಬೇಕಾದರೆ ಆಗ ಸುಮಾರು ೧೨ ವರ್ಷ ಕಲಿಯಬೇಕಿತ್ತು. ಈಗ ಪರಿಸ್ಥಿತಿ ಬದಲಾಗಿದೆ. ಇವತ್ತೇ ಕಲಿತು, ನಾಳೆ ಹಾಡುತ್ತಾನೆ. ಸಂಗೀತ ನಿರ್ದೇಶಕನೂ ಆಗುತ್ತಾನೆ. ಈಗ ಶೋಕೀ ಕಡೆ ಹೆಚ್ಚು ಒತ್ತು ಕೊಡುತ್ತಾರೆಯೇ ಹೊರತು ಅನನ್ಯವಾದ ಕಲೆಯ ಕಡೆ ಅಲ್ಲ.

ಕಲಾವಿದನಿಗೆ ಶ್ರಮವಿದೆ. ಒಂದು ಪಾತ್ರದಿಂದ ಹೆಸರು ಬಂದರೆ ಸಾಕು, ಮುಂದೆ ಅದಕ್ಕಾಗಿ ಶ್ರಮಿಸಲ್ಲ. ಅಲ್ಪ ತೃಪ್ತಿಯವರೇ ಹೆಚ್ಚು. ಒಂದೊಂದು ಪಾತ್ರ ಒಂದೊಂದು ರೀತಿಯಲ್ಲಿರುತ್ತವೆ. ಒಂದು ಸಣ್ಣ ಪಾತ್ರದಲ್ಲಿ ಅಭಿನಯಿಸುವುದೂ ಮುಖ್ಯವೇ. ಕಲಾವಿದನಿಗೆ ಸದಾ ಕಲೆಯೇ ಧ್ಯಾನವಾಗಿರಬೇಕು. ನಿರಂತರ ಕಲಿಯುವ ಮನಸ್ಸನ್ನು ಹೊಂದಿರಬೇಕು. ನೋಡುವುದರಿಂದ, ಕೇಳುವುದರಿಂದ ಕಲಿಯುವುದಿರುತ್ತದೆ. ನಯ, ವಿನಯ ಹಾಗೂ ಬತ್ತದ ಉತ್ಸಾಹದಿಂದ ಕೂಡಿದ ಪ್ರಯತ್ನ ಕಲಾವಿದನಾದವನಿಗೆ ಅಗತ್ಯ. ಯಾರೇ ಕಲಾವಿದ ನನ್ನ ಜೀವನದಲ್ಲಿ ಶ್ರೇಷ್ಠ ಸಾಧನೆ ಮಾಡಿದ್ದೇನೆ ಎನ್ನುವುದು ಕಷ್ಟ.

*** ರಂಗಭೂಮಿ, ಚಲನಚಿತ್ರಗಳಿಗೆ ನೀಡುವ ಪ್ರಶಸ್ತಿಗಳ ಬಗ್ಗೆ ನಿಮ್ಮ ಅಭಿಪ್ರಾಯವೇನು ?**

ವಾಸುದೇವರಾವ್ : ಪ್ರಶಸ್ತಿಗಳನ್ನು ಕೊಡುವಾಗ ಅರ್ಹರಾದವರನ್ನು ಆಯ್ಕೆ ಮಾಡಬೇಕು. ಆದರೆ ಅನೇಕ ಸಲ ಹಾಗಾಗುತ್ತಿಲ್ಲ. ಬೇರೆ ಬೇರೆ ಕಾರಣಗಳಿಂದ ಪ್ರಶಸ್ತಿಗಳನ್ನು ಅನೇಕರು ಪಡೆಯುತ್ತಿದ್ದಾರೆ. ಯಾವುದೇ ಕ್ಷೇತ್ರದಲ್ಲಿ ಅಪಾರವಾಗಿ ಶ್ರಮಿಸಿದವನಿಗೆ ಪ್ರಶಸ್ತಿ ದೊರೆತಾಗ ಅದರ ಖುಶಿಯೇ ಬೇರೆ. ಶ್ರಮವಿಲ್ಲದೆ ಅವು ಸಿಕ್ಕಿದರೆ ಅವುಗಳ ಮೌಲ್ಯಕ್ಕೆ ಬೆಲೆಯಿಲ್ಲದಂತಾಗುತ್ತದೆ. ನನಗೆ ಪ್ರಶಸ್ತಿ ಬರುವ ಹೊತ್ತಿಗೆ ಸುಮಾರು ಐವತ್ತು ವರ್ಷಗಳ ಕಾಲ ನಾಟಕದಲ್ಲಿ ದುಡಿದಿದ್ದೆ.

*** ಕಲಾವಿದರ ಸಮಸ್ಯೆಗಳನ್ನು ಕುರಿತು ನೀವು ಸರ್ಕಾರಕ್ಕೇನಾದರೂ ಮನವಿ ಮಾಡಬಯಸುವಿರಾ ?**

ವಾಸುದೇವರಾವ್ : ಕಲಾವಿದರ ಜೀವನಾಧಾರಕ್ಕೆ ಏನಾದರೂ ವ್ಯವಸ್ಥೆ ಮಾಡಬೇಕು. ಶಿಕ್ಷಣ ಕಲಿತವನಿಗೆ ಸರ್ಕಾರಿ ಹುದ್ದೆಗಳಿಗೆ ಅವಕಾಶವಿರುತ್ತದೆ. ಆದರೆ ತಮ್ಮ ಪ್ರತಿಕ್ಷಣವನ್ನೂ ಕಲೆಗಾಗಿ ತೇಯುವವರ ಬದುಕು ಬಹಳ ಸಂಕಷ್ಟದಲ್ಲಿರುತ್ತದೆ. ಅಂಥವರ ಜೀವನಕ್ಕೆ ಒಂದು ಸರಿಯಾದ ಆಧಾರವಾದರೆ ಅವರಿಂದ ಮತ್ತಷ್ಟು ಕೊಡುಗೆ ದೊರೆಯುತ್ತದೆ.

ಕಲಾವಿದರಿಂದ ದುಡಿಸಿಕೊಂಡವರು ಅವರಿಗೆ ಅನ್ಯಾಯ ಮಾಡಬಾರದು. ಹಾಗೆ ನೋಡಿದರೆ ಸರ್ಕಾರ ಸಹಾಯ ಮಾಡುತ್ತಿದೆ.

* ನಿಮ್ಮಲ್ಲಿ ಉಳಿದಿರುವ ಕನಸುಗಳಾವವು?

" ವಾಸುದೇವರಾವ್ : ನನಗೆ ಇನ್ನೂ ಉತ್ತಮವಾದ ಪಾತ್ರಗಳನ್ನು ಮಾಡಿ ಜನರೊಳಗೆ ಉಳಿಯಬೇಕೆಂಬ ಕನಸಿದೆ. ಹಣ, ಐಶಾರಾಮದ ಬದುಕಿಗಿಂತ ಈ ಕನಸೇ ನನಗೆ ದೊಡ್ಡದಾಗಿದೆ.

* * * *

ಹೀಗೆ ತಮ್ಮ ಅನಿಸಿಕೆಗಳನ್ನು ತೋಡಿಕೊಂಡ ವಾಸುದೇವರಾವ್-ರೊಳಗೆ ಇವರನ್ನು ಸರಿಯಾದ ಪಾತ್ರಗಳಿಗೆ ಆಯ್ಕೆ ಮಾಡಿಕೊಳ್ಳದ ವ್ಯವಸ್ಥೆಯ ಬಗ್ಗೆ ನೋವಿದೆ. ಎಂಥ ಪಾತ್ರವನ್ನೇ ಆಗಲಿ ಪರದೆಯ ಮೇಲೆ ಅದಕ್ಕೆ ಮರುಹುಟ್ಟು ನೀಡುವ ಚೇತನವಿರುವ ಇವರಿಗೆ, ಇತ್ತೀಚೆಗೆ ಚಿತ್ರಗಳಿಗೆ ಕೇವಲ ಬಂಡವಾಳ ಮಾಡುವ ದಾಹ ಬರುತ್ತಿರುವುದರ ಬಗ್ಗೆ ಭಯವಿದೆ.



ಎಂ. ವಿ. ವಾಸುದೇವರಾವ್ ಮತ್ತು ಪತ್ನಿ ಮೀರಾಬಾಯಿ



ಬಿ. ಜಯಮ್ಮ ಅವರೊಂದಿಗೆ ವಾಸುದೇವರಾವ್



'ಚೋಮನ ದುಡಿ'ಗೆ ಪ್ರಶಸ್ತಿ ಬಂದಾಗ ಪ್ರಧಾನಿ ಇಂದಿರಾ ಗಾಂಧಿ ಅವರೊಂದಿಗೆ




ಶಿವರಾಮ ಕಾರಂತರೊಂದಿಗೆ



ನಿಟ್ಟೂರು ಶ್ರೀನಿವಾಸರಾವ್ ಮತ್ತು ಡಾ. ರಾಜಕುಮಾರ ಅವರೊಂದಿಗೆ



ಸಂತೋಷಕುಮಾರ ಗುಲ್ವಾಡಿ, ಬಿ. ವಿ. ಕಾರಂತ ಮತ್ತು ಪ್ರೇಮಾ ಕಾರಂತ ಅವರೊಂದಿಗೆ



ಒರಿಯಾ ಚಿತ್ರವೊಂದರಲ್ಲಿ ವಾಸುದೇವರಾವ್



ಎಂ. ವಿ. ವಾಸುದೇವರಾವ್ : ಒಂದು ಭಾವಮುದ್ರೆ

# ಕರ್ನಾಟಕ ನಾಟಕ ಅಕಾಡೆಮಿ

## ಅಧ್ಯಕ್ಷರು ಮತ್ತು ಸದಸ್ಯರು

೧. ಶ್ರೀ ಸಿ. ಜಿ. ಕೃಷ್ಣಸ್ವಾಮಿ, ಬೆಂಗಳೂರು
ಅಧ್ಯಕ್ಷರು
೨. ಪ್ರೊ. ಸಿದ್ದಲಿಂಗ ಪಟ್ಟಣಶೆಟ್ಟಿ, ಧಾರವಾಡ
೩. ಶ್ರೀ ಚೆನ್ನವೀದ ಝುಳಕಿ, ಬಿಜಾಪುರ
೪. ಶ್ರೀ ಪಿ. ಮುನಿರೆಡ್ಡಿ, ಮದ್ದೇರಿ
೫. ಶ್ರೀಮತಿ ಕೆ. ನಾಗರತ್ನಮ್ಮ, ಮರಿಯಮ್ಮನಹಳ್ಳಿ
೬. ಶ್ರೀ ಶಿವರಾಂ, ಮಂಡ್ಯ
೭. ಶ್ರೀ ಸಿ. ಎಂ. ನರಸಿಂಹಮೂರ್ತಿ, ಚಾಮರಾಜನಗರ
೮. ಶ್ರೀ ಶಂಕ್ರಯ್ಯ ಘಂಟಿ, ಗುಲ್ಬರ್ಗಾ
೯. ಶ್ರೀ ಎಸ್. ವಿ. ಪಾಟೀಲ, ಗುಂಡೂರು
೧. ಶ್ರೀಮತಿ ವಿಶ್ವೇಶ್ವರಿ ಹಿರೇಮಠ, ಧಾರವಾಡ
೧. ಶ್ರೀ ಚೆಂದೋಡಿ ಶಂಭುಲಿಂಗಪ್ಪ, ದಾವಣಗೆರೆ
೧೨. ಶ್ರೀ ಹೆಚ್. ಎಂ. ಮಯಾಬ್ರಹ್ಮಾಚಾರ್, ಬೆಂಗಳೂರು
೧೩. ಶ್ರೀ ಕೆ. ವಿ. ನಾಗರಾಜಮೂರ್ತಿ, ಬೆಂಗಳೂರು
೧೪. ಶ್ರೀ ಕಾಸರಗೋಡು ಚಿನ್ನಾ, ಕಾಸರಗೋಡು
೧೫. ಶ್ರೀ ಟಿ. ರಘು, ಬೆಂಗಳೂರು
೧೬. ಶ್ರೀ ಎಂ. ಸಂಪಂಗಿ, ಬೆಂಗಳೂರು
೧೭. ಶ್ರೀ ಎಚ್. ಎಸ್. ನೀಲಕಂಠ, ಬೆಂಗಳೂರು
೧೮. ಶ್ರೀಮತಿ ಎಸ್. ಮಾಲತಿ, ಸಾಗರ
೧೯. ಶ್ರೀ ಸಿ. ಕೆ. ಗುಂಡಣ್ಣ, ಬೆಂಗಳೂರು
೨೦. ಶ್ರೀಮತಿ ಪಂಕಜ ರವಿಶಂಕರ್, ಬೆಂಗಳೂರು
೨೧. ಶ್ರೀ ಕಾಗೋಡು ಅಣ್ಣಪ್ಪ, ಸಾಗರ
೨೨. ಶ್ರೀ ಎಚ್. ಎಸ್. ಉಮೇಶ್, ಮೈಸೂರು
೨೩. ಶ್ರೀ ಮಾ. ನರಸಿಂಹಮೂರ್ತಿ, ಬೆಂಗಳೂರು
೨೪. ಶ್ರೀ ಐ. ಕೆ. ಬೊಳುವಾರ್, ಪುತ್ತೂರು
೨೫. ಶ್ರೀ ಹೂಲಿ ಶೇಖರ್, ಅಂಬಿಕಾನಗರ
೨೬. ಶ್ರೀ ಬಿ. ಟಿ. ಮುನಿರಾಜಯ್ಯ
ರಿಜಿಸ್ಟ್ರಾರ್
೨೭. ಆರ್. ಎಸ್. ದಳವಾಯಿ
ಅರ್ಥಸದಸ್ಯರು,
ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ